24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 24 | ನವದೆಹಲಿ | ಬೆಲೆ ₹10 | ಜುಲೈ 20 2026, ಸೋಮವಾರ



24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಜುಲೈ 20 2026, ಸೋಮವಾರ

## ಒಳಪುಟಗಳಲ್ಲಿ

ವ್ಯಕ್ತಿತ್ವ, ಸೇವಾ ಮನೋಭಾವ, ಕಠಿಣ ಪರಿಶ್ರಮದಿಂದ ಬೆಂಕಿಯಲ್ಲಿ ಅರಳಿದ ಹೂವಾದ ಮಲ್ಲಿಕಾರ್ಜುನ ಖರ್ಗೆ: ಡಾ. ಆನಂದಕುಮಾರ್ - ಪು.4

# ಇಂದಿನಿಂದ ಸಂಸತ್ ಮುಂಗಾರು ಅಧಿವೇಶನ

## ಕ್ಷೇತ್ರ ಪುನರ್ ವಿಂಗಡನೆ □ ಮಹಿಳಾ ಮೀಸಲಾತಿ □ ಒಂದು ದೇಶ ಒಂದು ಚುನಾವಣೆ ಮಸೂದೆ ಮಂಡನೆ

## ದೇಣಿಗೆ ದುರುಪಯೋಗ: ರಾಜಕೀಯ ಜಿದ್ದಾಜಿದ್ದಿಗೆ ವೇದಿಕೆಯಾಗಲಿರುವ ಆಡಳಿತ ಪಕ್ಷ - ಪ್ರತಿಪಕ್ಷಗಳ ಚರ್ಚೆ

**ನವದೆಹಲಿ, ಜು.19:** ಇಂದಿನಿಂದ ಸಂಸತ್ ಮುಂಗಾರು ಅಧಿವೇಶನ ಆರಂಭವಾಗುತ್ತಿದೆ. ಈ ಬಾರಿಯ ಮುಂಗಾರು ಅಧಿವೇಶನ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ದೇಶದ ರಾಜಕೀಯ ಚಿತ್ರಣ ಬದಲಾಗುತ್ತಿದ್ದು ಈ ಬಾರಿಯ ಅಧಿವೇಶನದಲ್ಲಿ ಸ್ಪಷ್ಟವಾಗಿ ಗೋಚರಿಸಲಿದೆ.



ಈ ಬಾರಿಯ ಅಧಿವೇಶನದಲ್ಲಿ ಬಹು ಚರ್ಚಿತ ಲೋಕಸಭೆಯ ಮಿತಿ ನಿರ್ಣಯ ಮತ್ತು ವಿಸ್ತರಣೆಯ ಕುರಿತಾದ ಸಂವಿಧಾನದ 131ನೇ ತಿದ್ದುಪಡಿ ಮಸೂದೆ, ಮಹಿಳಾ ಮೀಸಲಾತಿ ಕಾನೂನಿನ ಅನುಷ್ಠಾನ ಮತ್ತು ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆಗಳನ್ನು ಕೋರುವ ಸಂವಿಧಾನದ 129ನೇ ತಿದ್ದುಪಡಿ ಮಸೂದೆ ಸೇರಿದಂತೆ ಹೆಗ್ಗುರುತು ಪ್ರಸ್ತಾಪಗಳು ಅಧಿವೇಶನವನ್ನು ತೀವ್ರ ರಾಜಕೀಯ ಸ್ಪರ್ಧೆಗೆ ಸಾಕ್ಷಿಯಾಗುವ ನಿರೀಕ್ಷೆಯಾಗಿಸಲಿದೆ.

2/3 ಬಹುಮತಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ತೆರೆಮರೆಯಲ್ಲಿ ಸಾಕಷ್ಟು ಕಸರತ್ತು ನಡೆಸುತ್ತಿದೆ. ಸದ್ಯ ಸದನದ ವ್ಯವಹಾರಗಳ ಪಟ್ಟಿಯಲ್ಲಿ ಮಸೂದೆಗಳನ್ನು ಉಲ್ಲೇಖಿಸದಿದ್ದರೂ, ಸರ್ಕಾರವು ಸಾಂವಿಧಾನಿಕ ತಿದ್ದುಪಡಿ ಮಸೂದೆಗಳನ್ನು ಪರಿಚಯಿಸಬಹುದು ಎನ್ನಲಾಗಿದೆ. ಸಂವಿಧಾನದ 368ನೇ ವಿಧಿಯ ಅಡಿ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಪ್ರತ್ಯೇಕವಾಗಿ ಪ್ರತಿ ಸದನದ ಒಟ್ಟು ಸದಸ್ಯತ್ವದ ಬಹುಮತದೊಂದಿಗೆ ಮತ್ತು ಹಾಜರಿರುವ ಮತ್ತು ಮತ ಚಲಾಯಿಸುವ ಕನಿಷ್ಠ ಮೂರನೇ ಎರಡರಷ್ಟು ಸದಸ್ಯರೊಂದಿಗೆ ಅಂಗೀಕರಿಸಬೇಕಿದೆ. ರಾಜ್ಯಸಭೆಯಲ್ಲಿ ಎನ್‌ಡಿಎಗೆ ಸಮಸ್ಯೆ ಇಲ್ಲದಿದ್ದರೂ ಲೋಕಸಭೆಯಲ್ಲಿ ಮೋದಿ ಸರ್ಕಾರಕ್ಕೆ ಇನ್ನಷ್ಟು ಸಂಖ್ಯೆ ಬೇಕಾಗಬಹುದು.

| ಲೋಕಸಭೆ | ರಾಜ್ಯಸಭೆ |
|---|---|
| ಒಟ್ಟು ಸದಸ್ಯರ ಸಂಖ್ಯೆ: 545 | ಒಟ್ಟು ಸದಸ್ಯರ ಸಂಖ್ಯೆ: 244 |
| ಸಂವಿಧಾನ ತಿದ್ದುಪಡಿಗೆ ಅಗತ್ಯವಿರುವ 2/3 ಬಹುಮತ: 360 ಮತಗಳು | ಸಂವಿಧಾನ ತಿದ್ದುಪಡಿಗೆ ಅಗತ್ಯವಿರುವ 2/3 ಬಹುಮತ: 162 ಮತಗಳು |
| ಪ್ರಸ್ತುತ ಎನ್‌ಡಿಎ ಬಲ: 336 | ಪ್ರಸ್ತುತ ಎನ್‌ಡಿಎ ಮತ್ತು ಬೆಂಬಲಿಗರ ಬಲ: 168 |
| ಬಿಜೆಪಿ ನೇತೃತ್ವದ ಎನ್‌ಡಿಎ: 298 | ಎನ್‌ಡಿಎ: 149 - ವೈಎಸ್‌ಆರ್‌ಸಿಪಿ: 4 |
| ಎನ್‌ಸಿಪಿ (ಅಜಿತ್ ಪವಾರ್): 20 | ಪಕ್ಷೇತರರು: 3 - ಬಿಜೆಡಿ: 5 |
| ಶಿವಸೇನೆ (ಶಿಂದೆ ಬಣ/UBT Rebels): 6 | ಬಿಆರ್‌ಎಸ್: 3 - ಯುಪಿಪಿಎಲ್: 2 |
| ಎನ್‌ಸಿಪಿ-ಎಸ್‌ಪಿ: 8 - ವೈಎಸ್‌ಆರ್‌ಸಿಪಿ: 4 | ಬಿಎಸ್‌ಪಿ: 1 - ಆರ್‌ಎಲ್‌ಎಂ: 1 |
| 2/3 ಬಹುಮತಕ್ಕೆ ಇನ್ನೂ 24 ಮತಗಳ ಕೊರತೆ ಇದೆ. | 2/3 ಬಹುಮತಕ್ಕಿಂತ 5 ಮತಗಳು ಹೆಚ್ಚಿವೆ |

### ಅಧಿವೇಶನದಲ್ಲಿ ಇತರ ಪ್ರಮುಖ ಮಸೂದೆಗಳ ಮಂಡನೆ

* ಮುಂಗಾರು ಅಧಿವೇಶನವು ಅಭಿವೃದ್ಧಿ ಹೊಂದಿದ ಭಾರತ ಶಿಕ್ಷಣ ಪ್ರತಿಷ್ಠಾನ ಮಸೂದೆ
* ಡೋಪಿಂಗ್ ವಿರೋಧಿ ಮಸೂದೆ
* ಆದಾಯ ತೆರಿಗೆ (ತಿದ್ದುಪಡಿ) ಮಸೂದೆ
* ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ತಿದ್ದುಪಡಿ ಮಸೂದೆ
* ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಮಸೂದೆ
* ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆ
* ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ (ತಿದ್ದುಪಡಿ) ಮಸೂದೆ
* ಸರ್ಕಾರವು ರಾಜ್ಯಸಭೆಯಲ್ಲಿ ವಂದೇ ಮಾತರಂ ಮಸೂದೆಯನ್ನು ಸಹ ಪರಿಚಯಿಸುವ ಸಾಧ್ಯತೆ
* ಈ ವರ್ಷದ ಮಾರ್ಚ್‌ನಲ್ಲಿ ಲೋಕಸಭೆಯಲ್ಲಿ ಪರಿಚಯಿಸಲಾದ ವಿದೇಶಿ ಕೊಡುಗೆ (ನಿಯಂತ್ರಣ) ತಿದ್ದುಪಡಿ ಮಸೂದೆ, 2026
* ಜಂಟಿ ಸಂಸದೀಯ ಸಮಿತಿಗೆ ಉಲ್ಲೇಖಿಸಲಾದ ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ ಮಸೂದೆ, 2025 ಎಂಬ ಎರಡು ಬಾಕಿ ಇರುವ ಮಸೂದೆಗಳನ್ನು ಕೈಗೆತ್ತಿಕೊಳ್ಳಬಹುದು.

### ಆಡಳಿತ ಪಕ್ಷ ಕಟ್ಟಿಹಾಕಲು ಪ್ರತಿಪಕ್ಷಗಳು ಸಿದ್ಧ

ಸಂಸತ್ ಅಧಿವೇಶನ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರೀ ಪೈಪೋಟಿಗೆ ವೇದಿಕೆಯಾಗಿ ಪರಿಣಮಿಸಲಿದೆ. ಆಡಳಿತರೂಢ ಎನ್‌ಡಿಎ ಸರ್ಕಾರದ ವೈಫಲ್ಯಗಳನ್ನು ಮುಂದಿಟ್ಟುಕೊಂಡು ಮುಗಿ ಬೀಳಲು ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಸಜ್ಜಾಗಿವೆ. ವಿರೋಧ ಪಕ್ಷಗಳು ತಮ್ಮ ಆಂತರಿಕ ಭಿನ್ನಮತ ಮತ್ತು ಪಕ್ಷಾಂತರಗಳ ನಡುವೆಯೂ ನೀಟ್ ಹಗರಣ ಮತ್ತು ರಾಮ ಮಂದಿರ ದೇಣಿಗೆ ವಿಚಾರ, ಸೋನಂ ವಾಂಗ್‌ಚುಕ್ ಅವರನ್ನ ಆಸ್ಪತ್ರೆಗೆ ದಾಖಲಿಸಿದ್ದು ಮುಂದಿಟ್ಟುಕೊಂಡು ಆಡಳಿತ ಪಕ್ಷವನ್ನು ಕಟ್ಟಿಹಾಕುಲು ಸಿದ್ಧವಾಗಿದೆ. ಆದರೆ, ಪ್ರತಿಪಕ್ಷಗಳಲ್ಲಿ ಒಡಕು ಮೂಡಿರುವ ಕಾರಣ, ಸದನದಲ್ಲಿ ಪ್ರಸ್ತಾಪಿಸಬೇಕು ಪ್ರತಿಯೊಂದು ಆರೋಪಗಳಿಗೆ ಅಲ್ಲಿಯೇ ಪ್ರತ್ಯುತ್ತರ ನೀಡಲು ಎನ್‌ಡಿಎ ಕೂಡ ಕಾರ್ಯತಂತ್ರ ರೂಪಿಸಿದೆ.

### ವಿರೋಧ ಪಕ್ಷದ ಅಸ್ತ್ರಗಳೇನು?

- ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ವಿದ್ಯಾರ್ಥಿಗಳ ಆತ್ಮಹತ್ಯೆ, ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆಗೆ ಒತ್ತಡ
- ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆ, ಏಕಾಏಕಿ ಸೋನಂ ವಾಂಗ್‌ಚುಕ್ ಆಸ್ಪತ್ರೆ ದಾಖಲು
- ರಾಮಮಂದಿರಾ ದೇಣಿಗೆ ಕಳ್ಳತನ ಪ್ರಕರಣ
- ಪೆಟ್ರೋಲ್ ನಲ್ಲಿ ಇ20 ಮಿಶ್ರಣದಿಂದ ಬರುತ್ತಿರುವ ದೂರುಗಳು
- ಮಧ್ಯಪ್ರಾಚ್ಯದಲ್ಲಿ ಯುದ್ಧ, ಭಾರತ ಅಮೇರಿಕಾದ ಸಂಬಂಧಗಳು, ಪೆಟ್ರೋಲಿಯಂ ಉತ್ಪನ್ನಗಳ ಕೊರತೆ, ಬೆಲೆ ಏರಿಕೆ ಸೇರಿದಂತೆ ಇತರ ವಿಷಯಗಳ ಮೇಲೆ ಮೋದಿ ಸರ್ಕಾರ ಕಟ್ಟಿ ಹಾಕುವ ಯತ್ನ

### ಕಾಂಗ್ರೆಸ್‌ಗೆ ಅಗ್ನಿಪರೀಕ್ಷೆ

- ಇಂಡಿಯಾ ಮೈತ್ರಿಕೂಟದಲ್ಲಿ ಗುರುತಿಸಿಕೊಂಡಿದ್ದ ತಮಿಳುನಾಡಿನ ಡಿಎಂಕೆ ಇದೇ ಮೊದಲ ಬಾರಿಗೆ ಲೋಕಸಭೆಯಲ್ಲಿ ಪ್ರತ್ಯೇಕವಾಗಿ ಪ್ರತಿಪಕ್ಷದ ಸ್ಥಾನದಲ್ಲಿ ಕೂರಲಿದೆ. ಹೀಗಾಗಿ ಡಿಎಂಕೆ ಪಕ್ಷದ ಸಂಸದರಿಗೆ ದಶಕಗಳ ನಂತರ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸಲಾಗುತ್ತದೆ
- ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋಲು ಕಂಡ ಟಿಎಂಸಿ ಕೂಡ ವಿಭಜನೆ ಹಾದಿ ಹಿಡಿದಿದೆ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವ ಟಿಎಂಸಿಯ ಸುಮಾರು 20ಕ್ಕೂ ಹೆಚ್ಚು ಸಂಸದರು ಎನ್‌ಸಿಪಿ ಜೊತೆ ವಿಲೀನವಾಗಿದ್ದು ಲೋಕಸಭೆಯಲ್ಲಿ ಈ ಸಂಸದರಿಗೂ ಸ್ಪೀಕರ್ ಓಂ ಬಿರ್ಲಾ ಅವರು ಪ್ರತ್ಯೇಕ ಆಸನದ ವ್ಯವಸ್ಥೆ ಒದಗಿಸಿದ್ದಾರೆ.
- ಮಹಾರಾಷ್ಟ್ರದಲ್ಲಿ ಉದ್ದವ್ ಠಾಕ್ರೆ ನೇತೃತ್ವದ ಶಿವಸೇನೆಯು ಎರಡು ಬಣಗಳಾಗಿದ್ದು, ಆರು ಜನ ಸಂಸದರು ಡಿಸಿಎಂ ಏಕನಾಥ್ ಶಿಂಧೆ ಬಣಕೆ ಸೇರ್ಪಡೆಯಾಗಿದ್ದಾರೆ.
- ಶರದ್ ಪವರ್ ನೇತೃತ್ವ ಎನ್‌ಸಿಪಿ ಕೂಡ ಕೆಲವು ಸಾಂವಿಧಾನಿಕ ಮಸೂದೆಗಳಿಗೆ ಷರತ್ತುಬದ್ಧ ಬೆಂಬಲ ನೀಡುವುದಾಗಿ ಘೋಷಣೆ ಮಾಡಿದೆ, ಹೀಗಾಗಿ ಇದು ಕಾಂಗ್ರೆಸ್‌ಗೆ ಅಗ್ನಿಪರೀಕ್ಷೆ ಒಡ್ಡಲಿದೆ.

# ಅಭಿಷೇಕ್ ಬ್ಯಾನರ್ಜಿ ಕಚೇರಿ ನೆಲಸಮಕ್ಕೆ ಹೈಕೋರ್ಟ್ ತಡೆ

**ಕೋಲ್ಕತ್ತಾ, ಜು.19:** ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಅಭಿಷೇಕ್ ಬ್ಯಾನರ್ಜಿಯ ಲೋಕಸಭಾ ಕ್ಷೇತ್ರದ ಕಚೇರಿ ಇದ್ದ ದಕ್ಷಿಣ 24 ಪರಗಣ ಜಿಲ್ಲೆಯ ಅಮ್ತಲಾದ ಕಟ್ಟಡವನ್ನು ನೆಲಸಮಗೊಳಿಸುವ ಕಾರ್ಯಾಚರಣೆಗೆ ಕಲ್ಕತ್ತಾ ಹೈಕೋರ್ಟ್ ಭಾನುವಾರ ತಡೆ ನೀಡಿದೆ. ಮುಂದಿನ ವಿಚಾರಣೆ ಅಥವಾ ನ್ಯಾಯಾಲಯದ ಮುಂದಿನ ಆದೇಶದವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಿದೆ. ಅಭಿಷೇಕ್ ಬ್ಯಾನರ್ಜಿ ತಂದೆ ಅಮಿತ್ ಬ್ಯಾನರ್ಜಿ ನಿರ್ದೇಶಕರಾಗಿರುವ ಲೀಪ್ಸ್ ಅಂಡ್ ಬೌಂಡ್ಸ್ ಕಂಪನಿಯ ಕಚೇರಿಯೂ ಇದೇ ಕಟ್ಟಡದಲ್ಲಿತ್ತು. ಕಟ್ಟಡ ನೆಲಸಮಗೊಳಿಸುವ ಮೊದಲು ನೋಟಿಸ್ ನೀಡದೆ ಅಕ್ರಮವಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಪಿಸಿ ಕಂಪನಿ ತುರ್ತು ಅರ್ಜಿ ಸಲ್ಲಿಸಿತ್ತು. ಈ ಪ್ರಕರಣದಲ್ಲಿ ಟಿಎಂಸಿಯೂ ಪ್ರತಿವಾದಿಯಾಗಿ ನ್ಯಾಯಾಲಯದ ಮೊರೆ ಹೋಗಿತ್ತು. ನ್ಯಾಯಮೂರ್ತಿ ರಾಜಾ ಬಸು ಚೌಧುರಿ ಅವರ ಪೀಠ ಭಾನುವಾರ ವಿಶೇಷವಾಗಿ ಅರ್ಜಿಯ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಾದ ಮಂಡಿಸಿದ ಮಾಜಿ ಅಡ್ವೊಕೇಟ್ ಜನರಲ್ ಕಿಶೋರ್ ದತ್ತಾ, ಮೊದಲೇ ನೋಟಿಸ್ ನೀಡದೆ ಕಟ್ಟಡ ತೆರವುಗೊಳಿಸಿರುವುದು ಕಾನೂನುಬಾಹಿರ ಎಂದು ವಾದಿಸಿದರು. ವಾದ ಆಲಿಸಿದ ಕೋರ್ಟ್ , ನೆಲಸಮ ಕಾರ್ಯಾಚರಣೆಯನ್ನು ತಕ್ಷಣ ಸ್ಥಗಿತಗೊಳಿಸಲು ಆದೇಶಿಸಿತು. ಸರ್ಕಾರ ತನ್ನ ಉತ್ತರ ಸಲ್ಲಿಸಿದ ಬಳಿಕ ಪ್ರಕರಣದ ಮುಂದಿನ ವಿಚಾರಣೆ ನಡೆಯಲಿದೆ ಎಂದು ತಿಳಿಸಿತು.

# 178 ತಾಲೂಕುಗಳಲ್ಲಿ ಮಳೆ ಕೊರತೆ: ಸಿಎಂ ಡಿ.ಕೆ.ಶಿವಕುಮಾರ್

**ಕುಡಿಯಲು ಮಾತ್ರ ನೀರು, ಸದ್ಯಕ್ಕೆ ಬೆಳೆಗೆ ನೀರಿಲ್ಲ**

**3,235 ಸಣ್ಣ ನೀರಾವರಿ ಕೆರೆಗಳಲ್ಲಿ 50%ಗಿಂತ ಕಡಿಮೆ ನೀರು**

**ಕೊಳವೆ ಬಾವಿ ಕೊರೆಯುವ ವಿಚಾರದಲ್ಲಿ ನಕಲಿ ಬಿಲ್‌ಗಳಿಗಿಲ್ಲ ಅವಕಾಶ**



ಸಭೆಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್‌ರೊಂದಿಗೆ ಡಿಸಿಎಂ ಡಾ.ಜಿ.ಪರಮೇಶ್ವರ, ಸಚಿವರಾದ ಕೆ.ಜೆ.ಜಾರ್ಜ್, ರಾಮಲಿಂಗಾರೆಡ್ಡಿ, ಈಶ್ವರ್ ಖಂಡ್ರೆ, ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಅಪರ ಮುಖ್ಯ ಕಾರ್ಯದರ್ಶಿಗಳಾದ ತುಷಾರ್ ಗಿರಿನಾಥ್, ಗೌರವ್ ಗುಪ್ತಾ ಮತ್ತಿತರರು ಭಾಗವಹಿಸಿದ್ದರು.

**ಬೆಂಗಳೂರು, ಜು.19:** ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮತ್ತು ರೈತರ ಹಿತರಕ್ಷಣೆಗೆ ಸರ್ಕಾರ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಆಡಳಿತ ಯಂತ್ರವು ಸಂಪೂರ್ಣವಾಗಿ ಸಜ್ಜಾಗಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಓಗಳ ಜೊತೆ ವಿಡಿಯೋ ಸಂವಾದ ನಡೆಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರಿಗಳಿಗೆ ಪ್ರಮುಖ ಮಾರ್ಗದರ್ಶನ ಹಾಗೂ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಗ್ರಾಮೀಣ ತಾಲ್ಲೂಕುಗಳಲ್ಲಿ ಕಾಡುತ್ತಿರುವ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಸರ್ಕಾರ ತಲಾ 1 ಕೋಟಿ ಹೆಚ್ಚುವರಿ ಅನುದಾನವನ್ನು ಘೋಷಿಸಿದೆ. ಇನ್ನು ಮುಂದೆ ಹೊಸ ಬೋರ್‌ವೆಲ್ ಕೊರೆಸುವಾಗ ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡಬೇಕೆಂದು ಆದೇಶಿಸಲಾಗಿದ್ದು, ಯಾವುದೇ ನಕಲಿ ಪ್ರಕರಣಗಳು ಕಂಡುಬಂದಲ್ಲಿ ಆಯಾ ಜಿಲ್ಲೆಯ ಸಿಇಓಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ಎಚ್ಚರಿಸಿದ್ದಾರೆ. ಮುಂದಿನ 15 ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಬರ ಪರಿಸ್ಥಿತಿಯ ಸಮಗ್ರ ವರದಿಯನ್ನು ಸಲ್ಲಿಸಲಾಗುತ್ತಿದ್ದು, ಎಲ್ಲಾ ಜಿಲ್ಲಾಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸಬೇಕು. ಈ ಹಿನ್ನೆಲೆಯಲ್ಲಿ ಡಿಸಿ–ಸಿಇಓಗಳು ತ್ವರಿತವಾಗಿ ಸಮಗ್ರ ಮಾಹಿತಿ ಸಂಗ್ರಹಿಸಿ ಕಳುಹಿಸಬೇಕು. ಒಂದು ವಾರದ ಒಳಗಾಗಿ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಕೃಷಿ, ಪಶುಸಂಗೋಪನೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕಾಗಿದ್ದು, ಸಣ್ಣ ಹಾಗೂ ಅತಿ ಸಣ್ಣ ರೈತರ ಹಿತರಕ್ಷಣೆಗೆ ಮೊದಲ ಆದ್ಯತೆ ನೀಡಬೇಕಿದೆ. ಸರ್ಕಾರ ಅಗತ್ಯವಿರುವ ಎಲ್ಲಾ ಅನುಕೂಲ, ಅನುದಾನಗಳನ್ನು ಹೇರಳವಾಗಿ ಕೊಡುತ್ತಿದೆ. ಇಷ್ಟಾದ ನಂತರವೂ ಕರ್ತವ್ಯಲೋಪದಿಂದ ಯಾವುದೇ ಜಿಲ್ಲೆಯಲ್ಲಿ ಅನಾಹುತ ಕಂಡು ಬಂದರೆ ಅದಕ್ಕೆ ನೀವೇ ಜವಾಬ್ದಾರಿ ಹೊರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಬರ ಪರಿಸ್ಥಿತಿ ಅಧ್ಯಯನಕ್ಕೆ ಬರುತ್ತಿರುವ ತಂಡಕ್ಕೆ ಪೂರಕ ಮಾಹಿತಿ ನೀಡಿ. ಅವರನ್ನು ಕ್ಷೇತ್ರಕ್ಕೆ ಕರೆದೊಯ್ದು ವಾಸ್ತವಾಂಶ ಮನವರಿಕೆ ಮಾಡಿಸಿ. ಸಣ್ಣ ಮತ್ತು ಅತಿಸಣ್ಣ ರೈತರ ಹಿತವನ್ನು ನಿರ್ಲಕ್ಷಿಸಬಾರದು. ಇವರ ಹಿತವೇ ನಿಮ್ಮಗಳ ಮುಖ್ಯ ಆದ್ಯತೆಯಾಗಬೇಕು. ವಿದ್ಯುತ್ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಮತ್ತು ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿಗೆ ವಿಶೇಷ ಗಮನ ನೀಡಲು ಸೂಚಿಸಲಾಗಿದ್ದು, ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸಿದ್ಧವಾಗಿಟ್ಟುಕೊಳ್ಳಲು 4G ವಿನಾಯಿತಿ ನೀಡಲಾಗಿದೆ. ಅಧಿಕಾರಿಗಳು ಕೇವಲ ಕಾಗದದ ವರದಿಗಳಿಗೆ ಸೀಮಿತವಾಗದೆ, 'ಟೀಮ್ ಕರ್ನಾಟಕ' ಮನಸ್ಥಿತಿಯೊಂದಿಗೆ ರಂಗಕ್ಕಿಳಿದು ಕಾರ್ಯಕ್ಷಮತೆ ಪ್ರದರ್ಶಿಸಬೇಕು ಎಂದು ಸಿಎಂ ತಾಕೀತು ಮಾಡಿದ್ದಾರೆ. ರಾಜ್ಯದಲ್ಲಿ ತೀವ್ರಗೊಂಡ ಮಳೆ ಕೊರತೆ ಮತ್ತು ಜಲಾಶಯಗಳ ಕರಗಿದ ಒಡಲು ಪ್ರಸ್ತುತ ರಾಜ್ಯದಲ್ಲಿ ಮಳೆ ಅಭಾವ ಆತಂಕಕಾರಿಯಾಗಿದ್ದು, ಜುಲೈ 18ರವರೆಗೆ ಒಟ್ಟಾರೆ ಶೇ.39ರಷ್ಟು ಮುಂಗಾರು ಮಳೆ ಕೊರತೆಯಾಗಿದೆ. ರಾಜ್ಯದ 170ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದು, ವಿಜಯನಗರ ಜಿಲ್ಲೆಯಲ್ಲಿ ಅತ್ಯಧಿಕ ಶೇ. 67ರಷ್ಟು ಮಳೆ ಕೊರತೆ ದಾಖಲಾಗಿದೆ. ಪ್ರಾದೇಶಿಕವಾಗಿ ಮಲೆನಾಡಿನಲ್ಲಿ ಶೇ. 43, ಕರಾವಳಿಯಲ್ಲಿ ಶೇ. 35, ಉತ್ತರ ಒಳನಾಡಿನಲ್ಲಿ ಶೇ. 33 ಹಾಗೂ ದಕ್ಷಿಣ ಒಳನಾಡಿನಲ್ಲಿ ಶೇ. 31ರಷ್ಟು ಮಳೆ ಕೊರತೆಯಾಗಿದೆ.

ಮಳೆ ಇಲ್ಲದೆ ಜಲಾಶಯಗಳ ನೀರಿನ ಮಟ್ಟ ತೀವ್ರವಾಗಿ ಕುಸಿದಿದ್ದು, ಪ್ರಮುಖ ಜಲಾಶಯಗಳಲ್ಲಿ ಕೇವಲ ಶೇ. 40 ರಷ್ಟು ಮಾತ್ರ ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 681.83 ಟಿಎಂಸಿ ನೀರಿದ್ದರೆ, ಪ್ರಸ್ತುತ ಕೇವಲ 359.98 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಲಿಂಗನಮಕ್ಕಿ, ಸೂಪ ಮತ್ತು ವರಾಹಿಯಂತಹ ಜಲವಿದ್ಯುತ್ ಜಲಾಶಯಗಳಲ್ಲಿ ಸರಾಸರಿ ಕೇವಲ ಶೇ.23 ರಷ್ಟು ನೀರಿದ್ದರೆ, ಕಾವೇರಿ ಕಣಿವೆಯಲ್ಲಿ ಶೇ.51 ಹಾಗೂ ಕೃಷ್ಣಾ ಕಣಿವೆಯಲ್ಲಿ ಶೇ. 48 ರಷ್ಟು ನೀರು ಸಂಗ್ರಹವಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ರೈತರು ಸಹ ಕಡಿಮೆ ನೀರಿನ ಬಳಕೆಯಾಗುವ ಪರ್ಯಾಯ ಬೆಳೆಗಳನ್ನು ಬೆಳೆಯುವ ಮೂಲಕ ಬರದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸರ್ಕಾರದೊಂದಿಗೆ ಕೈಜೋಡಿಸಬೇಕೆಂದು ಮನವಿ ಮಾಡಲಾಗಿದೆ.

> **ಟೀಮ್ ಕರ್ನಾಟಕ ಆಗಿ ಕೆಲಸ ಮಾಡಿ; ಕೇವಲ ಪೇಪರ್ ವರದಿ ನೀಡಿದರೆ ನಾನು ಕೇಳುವುದಿಲ್ಲ: ಡಿ ಕೆ ಶಿವಕುಮಾರ್**
>
> ಟೀಮ್ ಕರ್ನಾಟಕ ಆಗಿ ಕೆಲಸ ಮಾಡಿ. ಕೇವಲ ಪೇಪರ್ ವರದಿ ನೀಡಿದರೆ ನಾನು ಕೇಳುವುದಿಲ್ಲ. ನನಗೆ ಫೀಲ್ಡ್ ರಿಪೋರ್ಟ್ ಮುಖ್ಯ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಕೇವಲ ಪೇಪರ್ ನಲ್ಲಿ ಎಲ್ಲಾ ಸರಿಯಾಗಿದೆ ಎನ್ನುವ ವರದಿ ನೀಡಿದರೆ ನಾನು ಕೇಳುವುದಿಲ್ಲ. ಫೀಲ್ಡ್ ರಿಪೋರ್ಟ್ ನನಗೆ ಸಿಗುತ್ತದೆ. ನನಗೆ ಸಿಗುವ ಸಾಕ್ಷಾತ್ ವರದಿ ಮತ್ತು ನೀವು ಅಧಿಕಾರಿಗಳು ಕೊಡುವ ಲಿಖಿತ ವರದಿ ನಡುವೆ ವ್ಯತ್ಯಾಸ ಇರಬಾರದು. ಆಡಳಿತಾತ್ಮಕವಾಗಿ ಟೀಮ್ ವರ್ಕ್ ಪ್ರದರ್ಶಿಸಿ ಎಂದು ಸಿಎಂ ಸೂಚಿಸಿದರು.

# ವಿಬಿ-ಜಿ ರಾಮ್-ಜಿ ಯೋಜನೆಯಡಿ ಉದ್ಯೋಗ ಒದಗಿಸಿ ಮತ್ತು ಜನರು ಹಸಿವಿನಿಂದ ಬಳಲುವುದನ್ನು ತಡೆಯಿರಿ: ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ



**ಬೆಂಗಳೂರು, ಜು.19:** ರಾಜ್ಯದಲ್ಲಿ ಬರಗಾಲ ಆವರಿಸಿದ್ದು, ಮುಂದಿನ ಹಲವು ವಾರಗಳ ಕಾಲ ಸಾಕಾಗುವಷ್ಟು ಮೇವು ಇದೆ. ಆದರೆ ಜನರು ಗುಳೆ ಹೋಗುವ ಪ್ರಮಾಣ ಹೆಚ್ಚಾಗಿದೆ. ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್ ಸಿಇಓಗಳು ವಿಬಿ–ಜಿ ರಾಮ್–ಜಿ ಯೋಜನೆಯಡಿ ಕೂಡಲೇ ಜನರಿಗೆ ಉದ್ಯೋಗ ನೀಡಬೇಕು ಅಲ್ಲದೇ ಗುಳೆ ಹೋಗುವುದನ್ನು ತಪ್ಪಿಸಲು ಕ್ರಮ ವಹಿಸುವಂತೆ ಎಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಅವರು ನಿರ್ದೇಶಿಸಿದರು.ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ 'ಬರ ಪರಿಸ್ಥಿತಿ, ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಕೃಷಿ, ಚಟುವಟಿಕೆ ಹಾಗೂ ಉದ್ಯೋಗ ವಿಷಯಗಳ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಜೊತೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಮಾಹಿತಿ ಪಡೆದರು.ವಿಜಯಪುರ ತಾಲ್ಲೂಕಿನಲ್ಲಿ ವಿಬಿ–ಜಿ ರಾಮ್ ಜಿ ಯೋಜನೆಯ ಅಡಿ 20 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಜನರಿಗೆ ಕೆಲಸ ನೀಡಲಾಗುತ್ತಿದೆ. ಬರಗಾಲದ ಹಿನ್ನೆಲೆಯಲ್ಲಿ ಜನ ಗುಳೆ ಹೋಗುತ್ತಿದ್ದಾರೆ ಎಂದು ವರದಿಯಾಗುತ್ತಿದೆ. ಕೂಡಲೇ ಕೆಲಸ ಆರಂಭಿಸಬೇಕು. ಜನರಿಗೆ ಊರುಗಳಲ್ಲಿ ಕೆಲಸ ನೀಡಿ, ಗುಳೆ ಹೋಗುವುದನ್ನು ತಪ್ಪಿಸಬೇಕು ಎಂದು ಹೇಳಿದರು.ವಿಬಿ ಜಿ ರಾಮ್ ಜಿ ಯೋಜನೆಯಡಿ ರಾಜ್ಯದ್ಯಾಂತ ತಿಂಗಳಿಗೆ 1.10 ಕೋಟಿ ಮಾನವ ದಿನಗಳನ್ನು ಸೃಜಿಸಿ, ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಈವರೆಗೂ ಕೆಲಸ ಆರಂಭಿಸಿಲ್ಲ. ಹೀಗಾದರೆ ಗುರಿ ಪೂರ್ಣಗೊಳಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಡಿಸಿಎಂ ಪರಮೇಶ್ವರ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.ಬರ ಇರುವುದರಿಂದ ಜನರಿಗೆ ಉದ್ಯೋಗದ ಅವಶ್ಯಕತೆ ಬಹಳ ಇದೆ. ಎಲ್ಲ ಜಿಲ್ಲಾ ಪಂಚಾಯತ್ ಸಿಇಓಗಳು ವಿಬಿ –ಜಿ ರಾಮ್ ಜಿ ಯೋಜನೆಯಡಿ ಕೂಡಲೇ ಜನರಿಗೆ ಕೆಲಸ ನೀಡಬೇಕು. ಈ ಬಗ್ಗೆ ತ್ವರಿತಗತಿಯಲ್ಲಿ ಕ್ರಮ ವಹಿಸಿ ಎಂದು ಹೇಳಿದರು.ಬಳ್ಳಾರಿ, ಬಾಗಲಕೋಟೆ, ಹಾವೇರಿ, ಚಾಮರಾಜನಗರ, ವಿಜಯಪುರ ಸೇರಿದಂತೆ ಮುಂತಾದ ಜಿಲ್ಲೆಗಳು ವಿಬಿ–ಜಿ ರಾಮ್–ಜಿ–ಯೋಜನೆಯಡಿ ಜನರಿಗೆ ಕೆಲಸ ನೀಡುವಲ್ಲಿ ತೀರ ಹಿಂದೆ ಬಿದ್ದಿವೆ. ಬಹುತೇಕ ಆರಂಭಿಸಿಲ್ಲ. ಚಾಮರಾಜನಗರ ಜಿಲ್ಲೆಯ ಅಂಕಿ–ಅಂಶ ಗಮನಿಸಿದರೆ ಆಶ್ಚರ್ಯವಾಗುತ್ತದೆ. ಜನ ತಮಿಳುನಾಡು, ಬೆಂಗಳೂರಿಗೆ ವಲಸೆ ಹೋಗುತ್ತಿದ್ದಾರೆ. ವಿಬಿ–ಜಿ ರಾಮ್–ಜಿ ಯೋಜನೆಯಡಿ ಏನೆಲ್ಲ ಕೆಲಸಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ಸಾರ್ವಜನಿಕರಿಗೆ ತಿಳಿಸುವ ಕೆಲಸವಾಗಬೇಕು ಎಂದು ಹೇಳಿದರು.ಬಹುತೇಕ ಜಿಲ್ಲೆಗಳಲ್ಲಿ 25 ವಾರ, 38 ವಾರ, 54 ವಾರಗಳಿಗೆ ಆಗುವಷ್ಟು ಮೇವು ಸಂಗ್ರಹವಿದೆ ಎಂದೆಲ್ಲ ಮಾಹಿತಿ ನೀಡಲಾಗುತ್ತಿದೆ. ರೈತರ ಬಳಿ ಸಂಗ್ರಹವಿರುವ ಮೇವಿನ ಬಣವೆಗಳನ್ನು ಆಧರಿಸಿ ಸರ್ಕಾರಕ್ಕೆ ಮಾಹಿತಿ ನೀಡುವುದು ಸರಿಯಲ್ಲ. ರೈತರು ಸಂಗ್ರಹಿಸಿರುವುದು ನಮಗೆ ಲಭ್ಯವಾಗುವುದಿಲ್ಲ. ನಿಮ್ಮಲ್ಲಿ ಲಭ್ಯತೆ ಇರುವುದನ್ನು ಮಾತ್ರ ತಿಳಿಸಬೇಕು. ಜಾನವಾರುಗಳಿಗೆ ತಕ್ಷಣಕ್ಕೆ ಮೇವು ಬೇಕು ಎಂದಾಗ ಒದಗಿಸುತ್ತೀರ ಎಂಬುದು ಮುಖ್ಯವಾಗುತ್ತದೆ ಎಂದು ಹೇಳಿದರು.

# ಪಶ್ಚಿಮ ಬಂಗಾಳದ ಚೆಗಡಿಭದ್ರತೆ ಪರಿಶೀಲಿಸಿದ ಶಾ: ಬಿಎಸ್‌ಎಫ್‌ನ ಮೂರು ಯೋಜನೆಗಳಿಗೆ ಚಾಲನೆ



**ಕೋಲ್ಕತ್ತಾ, ಜು.19:** ಕೇಂದ್ರ ಗೃಹ ಸಚಿವ ಅಮಿತ್ ಪಶ್ಚಿಮ ಬಂಗಾಳದ ಭಾರತ–ಬಾಂಗ್ಲಾದೇಶ ಗಡಿಭಾಗಕ್ಕೆ ಭೇಟಿನೀಡಿ ಗಡಿ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದರು. ಈ ವೇಳೆ ಗಡಿ ಬೇಲಿಯನ್ನು ಯಾರಾದರೂ ಹಾನಿಗೊಳಿಸಿದರೆ ತಕ್ಷಣವೇ ಬಿಎಸ್‌ಎಫ್ ಸಿಬ್ಬಂದಿಗೆ ಎಚ್ಚರಿಕೆ ನೀಡುವ ಸ್ವದೇಶಿ ರೇಡಿಯೋ ಆಧಾರಿತ ಸ್ಮಾರ್ಟ್ ಫೆನ್ಸಿಂಗ್ ವ್ಯವಸ್ಥೆಯನ್ನು ವೀಕ್ಷಿಸಿದರು. ಅಲ್ಲದೆ ಬಿಎಸ್‌ಎಫ್‌ನ ಮೂರು ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸಿದರು. ಬಿಜೆಪಿ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಅಮಿತ್ ಶಾ ನಡೆಸಿದ ಮೊದಲ ಸ್ಥಳೀಯ ಗಡಿ ಭದ್ರತಾ ಪರಿಶೀಲನೆ ಇದಾಗಿದೆ. ಮೂರು ದಿನಗಳ ರಾಜ್ಯ ಪ್ರವಾಸದಲ್ಲಿರುವ ಶಾ, ಭಾರತ?ಬಾಂಗ್ಲಾದೇಶ ಗಡಿಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ ಕುರಿತು ಉನ್ನತ ಮಟ್ಟದ ಸಭೆಗಳನ್ನು ನಡೆಸಿ ಗಡಿ ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡಿದರು.

# ರಾಮ ಮಂದಿರ ಟ್ರಸ್ಟ್ ದೇಣಿಗೆ ಹಗರಣದ ಬಗ್ಗೆ ಸ್ವತಂತ್ರ ತನಿಖೆ ನಡೆಸಿ: ಪ್ರಧಾನಿಗೆ ಖರ್ಗೆ, ರಾಹುಲ್‌ಗಾಂಧಿ ಪತ್ರ

**ನವದೆಹಲಿ, ಜು.19:** ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಹಣಕಾಸು ವ್ಯವಹಾರಗಳ ಬಗ್ಗೆ ಸ್ವತಂತ್ರ ಮತ್ತು ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಜು.18 ರಂದು ಬರೆದ ಜಂಟಿ ಪತ್ರದಲ್ಲಿ, ಟ್ರಸ್ಟ್‌ನಲ್ಲಿ ಸಾವಿರಾರು ಕೋಟಿಗಳ ಕಳ್ಳತನ ನಡೆದಿರುವ ಬಗ್ಗೆ ಪ್ರಧಾನಿಗೆ ತಿಳಿದಿದೆ ಮತ್ತು ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವಂತೆ ಇಬ್ಬರು ಹಿರಿಯ ಕಾಂಗ್ರೆಸ್ ನಾಯಕರು ಒತ್ತಾಯಿಸಿದರು. ಸುಪ್ರೀಂ ಕೋರ್ಟ್‌ನ ನಿರ್ದೇಶನ ಅನುಸರಿಸಿ ಪ್ರಧಾನಿ



ಸಂಸತ್ತಿನಲ್ಲಿ ಟ್ರಸ್ಟ್ ರಚನೆಯನ್ನು ಘೋಷಿಸಿದ್ದಾರೆ ಆದರೆ ಅದರ ಸದಸ್ಯರನ್ನು ಕೇಂದ್ರ ಸರ್ಕಾರ ಮಾತ್ರ ನೇಮಿಸಿದೆ ಎಂದು ಖರ್ಗೆ ಮತ್ತು ಗಾಂಧಿ ಆರೋಪಿಸಿದ್ದಾರೆ. ಈ ವಿಷಯದ ಬಗ್ಗೆ ಪ್ರಧಾನಿ ಮೌನವಾಗಿದ್ದಾರೆ ಎಂದು ಆರೋಪಿಸಿದ ಕಾಂಗ್ರೆಸ್ ನಾಯಕರು, ಇಂತಹ ಅಪರಾಧದ ಸಂದರ್ಭದಲ್ಲಿ ನಿಮ್ಮ ಮೌನ ಸ್ವೀಕಾರಾರ್ಹವಲ್ಲ. ಹೊಣೆಗಾರಿಕೆ ಮತ್ತು ಮರುಪಾವತಿಯನ್ನು ಖಚಿತಪಡಿಸಿ ಕೊಳ್ಳುವುದು ನಿಮ್ಮ ಕರ್ತವ್ಯ ಎಂದು ಹೇಳಿದರು. ನಗದು, ಚಿನ್ನ ಮತ್ತು ಬೆಳ್ಳಿ ಸೇರಿದಂತೆ ಎಲ್ಲಾ ಕಾಣಿಕೆಗಳ ನಿರ್ವಹಣೆ ಸೇರಿದಂತೆ ಟ್ರಸ್ಟ್‌ನ ಹಣಕಾಸು ವ್ಯವಹಾರಗಳ ಬಗ್ಗೆ ಸ್ವತಂತ್ರ ಮತ್ತು ಸಮಗ್ರ ತನಿಖೆಗೆ ತಕ್ಷಣ ಆದೇಶಿಸಬೇಕು ಎಂದು ಅವರು ಪ್ರಧಾನಿಯನ್ನು ಒತ್ತಾಯಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363


21.7.2026
ಎಂ.ಕೃಷ್ಣಪ್ಪ
ಮಾಜಿ ಸಚಿವರು ಹಾಗೂ ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ
ಪ್ರಿಯಾಕೃಷ್ಣ
ಶಾಸಕರು, ಗೋವಿಂದರಾಜ ವಿಧಾನಸಭಾ ಕ್ಷೇತ್ರ
ಎಐಸಿಸಿಯ ಅಧ್ಯಕ್ಷರು ಹಾಗೂ ರಾಜ್ಯಸಭಾ ವಿರೋಧ ಪಕ್ಷದ ನಾಯಕರಾದ ಶ್ರೀಯುತರಾದ
ಮಲ್ಲಿಕಾರ್ಜುನ ಖರ್ಗೆ
ಅವರಿಗೆ...
ಜನುಮದಿನದ ಶುಭಾಶಯಗಳು
ಪ್ರದೀಪ್ ಕೃಷ್ಣ
ಯುವ ನಾಯಕರು ವಿಜಯನಗರ ವಿಧಾನಸಭಾ ಕ್ಷೇತ್ರ ಬೆಂಗಳೂರು, ಕರ್ನಾಟಕ
ಶುಭ ಕೋರುವವರು:
ಎಂ.ಕೃಷ್ಣಪ್ಪ, ಮಾಜಿ ಸಚಿವರು ಹಾಗೂ ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ
ಹಾಗೂ ಪ್ರಿಯಾಕೃಷ್ಣ ಶಾಸಕರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು

# ಬಿಜೆಪಿ ಆಡಳಿತದಲ್ಲಿ 152 ಬಾರಿ ಪ್ರಶ್ನೆಪತ್ರಿಕೆ ಸೋರಿಕೆ: ಹರಿಪ್ರಸಾದ್ ಕಿಡಿ

**ಬೆಂಗಳೂರು, ಜು.19:** ಶಿಕ್ಷಣ ಸಂವಿಧಾನ ನೀಡಿರುವ ಮೂಲಭೂತ ಹಕ್ಕು. ಇದನ್ನು ಕೇಂದ್ರ ಬಿಜೆಪಿ ಸರಕಾರ ಸಂಪೂರ್ಣವಾಗಿ ಧ್ವಂಸ ಮಾಡುತ್ತಿದೆ. ಪ್ರಶ್ನೆಪತ್ರಿಕೆ ಕೇವಲ ವಿದ್ಯಾರ್ಥಿಗಳ ಮೇಲೆ ಮಾತ್ರವಲ್ಲ ಇಡೀ ಕುಟುಂಬದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕರು ಉಪವಾಸ ಬಿದ್ದು, ಸಾಲ ಮಾಡಿ ಓದಿಸಿದ ಬಳಿಕ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಆ ಮಕ್ಕಳಿಗೆ ಅನ್ಯಾಯವಾದರೆ ಆ ಕುಟುಂಬ ಹಾಗೂ ವಿದ್ಯಾರ್ಥಿಗಳ ಪರಿಸ್ಥಿತಿ ಏನು? ಕರ್ನಾಟಕದಲ್ಲೂ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆಸಲಾಗಿತ್ತು. ಇದರ ವಿರುದ್ಧ ಪ್ರತಿಭಟನೆ ಮಾಡಿದ ಕಾರಣಕ್ಕೆ ನನ್ನ ಮೇಲೆ ಕೇಸ್ ದಾಖಲಾಗಿತ್ತು. ಇತ್ತೀಚೆಗಷ್ಟೇ ನ್ಯಾಯಾಲಯ ಅದನ್ನು ರದ್ದುಗೊಳಿಸಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಭಾರತದ ಶೈಕ್ಷಣಿಕ ಕೇಂದ್ರ ಎಂದೇ ಪರಿಗಣಿಸಲಾಗಿರುವ ರಾಜಸ್ಥಾನದ ಕೋಟಾದಲ್ಲಿ ವಿದ್ಯಾರ್ಥಿಗಳ ಸರಣಿ ಆತ್ಮಹತ್ಯೆ ಕುರಿತು ಹಾಗೂ ವಿದ್ಯಾರ್ಥಿಗಳ ಆತ್ಮಸ್ಥೈರ್ಯ ಹೆಚ್ಚಿಸಲು ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳ ಧ್ವನಿ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಅವರು ಕೆಲವು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. 2014ರಿಂದ 2026ರವರೆಗೆ 152 ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಉತ್ತರ ಭಾರದ ಪ್ರಶ್ನೆಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳ ಭವಿಷ್ಯ ಆತಂತಕಕ್ಕೆ ಸಿಲುಕಿವೆ. ಬಿಜೆಪಿ ಸರಕಾರ ಇರುವ ರಾಜ್ಯಗಳಲ್ಲೇ ಈ ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿದ್ದು, ಇದರ ಫಲಾನುಭವಿಗಳು ಬಿಜೆಪಿ ನಾಯಕರ ಮಕ್ಕಳಾಗಿದ್ದಾರೆ. ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ರಾಜ್ಯಗಳಲ್ಲಿ ಬಿಜೆಪಿ ನಾಯಕರ ಮಕ್ಕಳಿಂದಲೇ ಪೊಲೀಸರು ಸೋರಿಕೆಯಾದ ಪ್ರಶ್ನೆಪತ್ರಿಕೆ ವಶಕ್ಕೆ ಪಡೆದಿದ್ದಾರೆ. ಇದು ಪ್ರಶ್ನೆಪತ್ರಿಕೆ ಸೋರಿಕೆ ವಿಚಾರ ಮಾತ್ರವಲ್ಲ. ಭಾರತದ ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸಾರ್ಹತೆ ಪ್ರಶ್ನೆಯಾಗಿದೆ ಎಂದು ಹೇಳಿದರು.



1947ರಲ್ಲಿ ಈದೇಶದ ಸಾಕ್ಷರತೆ ಪ್ರಮಾಣವನ್ನು 76%ಗೆ ಏರಿಕೆ ಮಾಡಲಾಗಿದ್ದು, 15 ವಿವಿಗಳಿಂದ 560 ವಿವಿ ಮಾಡಲಾಗಿದೆ. ಐಐಟಿ, ಐಐಎಂ, ಐಐಎಸ್, ಏಮ್ಸ್ ನಂತಹ ಸಂಸ್ಥೆಗಳನ್ನು ಆರಂಭಿಸುವ ಮೂಲಕ ಪಂಡಿತ್ ಜವಾಹರ್ ಲಾಲ್ ನೆಹರೂ ಅವರು ದೇಶದ ಲಕ್ಷಾಂತರ ಹಾಗೂ ಕೋಟ್ಯಂತರ ಮಕ್ಕಳ ಭವಿಷ್ಯಕ್ಕಾಗಿ ನಿರ್ಮಿಸಿರುವ ಶಿಕ್ಷಣ ಕ್ಷೇತ್ರದ ಮೇಲೆ ದೊಡ್ಡ ದಾಳಿಯಾಗಿದೆ. ಇದು ಆತಂಕಕಾರಿ ವಿಚಾರ.ಬಿಜೆಪಿ ಎಲ್ಲೆಲ್ಲಿ ಅಧಿಕಾರದಲ್ಲಿದೆಯೋ ಅಲ್ಲೆಲ್ಲವೂ ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿದೆ, ಪ್ರಶ್ನೆಪತ್ರಿಕೆ ಸೋರಿಕೆಗೂ ಬಿಜೆಪಿಗೂ ಇರುವ ಸಂಬಂಧವೇನು? ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿದ್ದರೆ ಮತ್ತೊಂದೆಡೆ ಪ್ರಧಾನಮಂತ್ರಿಗಳು ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮ ಮಾಡುತ್ತಾರೆ. ನಕಲಿ ಪದವಿ ಪ್ರಮಾಣಪತ್ರ ಇಟ್ಟುಕೊಂಡಿರುವ ಪ್ರಧಾನಮಂತ್ರಿಗಳು ಮಕ್ಕಳ ಭವಿಷ್ಯ ಅಪಾಯಕ್ಕೆ ಸಿಲುಕಿಸಿದ್ದಾರೆ. ಮಕ್ಕಳ ಭವಿಷ್ಯ ಉಜ್ವಲವಾದರೆ ಮಾತ್ರ, ದೇಶದ ಭವಿಷ್ಯ ಉಜ್ವಲವಾಗುತ್ತದೆ. ಈ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಗಂಭೀರವಾದ ತನಿಖೆ ನಡೆಯಬೇಕು. ಈ ಎಲ್ಲಾ ಪ್ರಕರಣಗಳನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ರಾಷ್ಟ್ರೀಯ ತನಿಖೆ ಆಗಬೇಕು.ಈ ತನಿಖೆಯಲ್ಲಿ ಯಾವುದೇ ರಾಜಕೀಯ ಪ್ರಭಾವ ಇರಬಾರದು.

ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಕಾಂಗ್ರೆಸ್ ಪಕ್ಷದ ಹೋರಾಟ ಒಂದು ಪರೀಕ್ಷೆಗಾಗಿ ಅಲ್ಲ, ಕೋಟ್ಯಂತರ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ. 2004ರಲ್ಲಿ ಯುಪಿಎ ಸರ್ಕಾರ ಸರ್ವ ಶಿಕ್ಷಣ ಅಭಿಯಾನ ಕಾನೂನು ತಂದು 1ರಿಂದ 12ನೇ ತರಗತಿವರೆಗೂ ಉಚಿತ ಶಿಕ್ಷಣ ನೀಡಿತು. ಆಮೂಲಕ ಶಿಕ್ಷಣ ಮೂಲಭೂತ ಹಕ್ಕು ಎಂದು ಸಾಬೀತುಪಡಿಸಿತು.ಕೇಂದ್ರ ಬಿಜೆಪಿ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುವುದನ್ನು ನಿಲ್ಲಿಸಬೇಕು. ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಭರವಸೆ ನೀಡಿ ಅವರ ಭವಿಷ್ಯದ ಕಡೆ ಗಮನಹರಿಸಬೇಕು. ಈ ದೇಶದ ಭವಿಷ್ಯ, ಪಾಕಿಸ್ತಾನ ಅಥವಾ ಬಾಂಗ್ಲಾದೇಶದ ಗಡಿ ಭಾಗಕ್ಕಿಂತ ಶಾಲಾ ತರಗತಿಯಲ್ಲಿ ನಿರ್ಧಾರವಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಬೇಕು ಎಂದವರು ಆಗ್ರಹಿಸಿದರು.ಈ ವಿಚಾರವಾಗಿ ಕರ್ನಾಟಕದಲ್ಲಿ ಹೋರಾಟ ನಡೆಯಲಿದೆಯೇ ಎಂದು ಕೇಳಿದಾಗ, 'ಈಗಾಗಲೇ ಹೋರಾಟಗಳು ನಡೆಯುತ್ತಲೇ ಇವೆಯಲ್ಲ. ನಾವು ಈ ವಿಚಾರದಲ್ಲಿ ಹೋರಾಟ ಮಾಡುತ್ತೇವೆ. ರಾಹುಲ್ ಗಾಂಧಿ ಕರ್ನಾಟಕದ ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡಲು ಮನವಿ ಮಾಡಿದ್ದೇವೆ' ಎಂದು ತಿಳಿಸಿದರು.

ಕೇಂದ್ರ ಶಿಕ್ಷಣ ಸಚಿವರು ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ, ಅಧಿವೇಶನದಲ್ಲಿ ಉತ್ತರ ನೀಡುವರೇ ಎಂದು ಕೇಳಿದಾಗ, 'ನಾವು ಈ ವಿಚಾರವಾಗಿ ಸಂಸತ್ತಿನಲ್ಲೂ ಹೋರಾಟ ಮಾಡುತ್ತೇವೆ. ಇದು ಕೇವಲ ಬಿಜೆಪಿ ವಿಚಾರವಲ್ಲ, ದೇಶದ ಮಕ್ಕಳ ಭವಿಷ್ಯದ ವಿಚಾರ. ಬಿಜೆಪಿ ನಾಯಕರ ಮಕ್ಕಳನ್ನು ತೇರ್ಗಡೆ ಗೊಳಿಸಲು ಈ ಪ್ರಶ್ನೆಪತ್ರಿಕೆ ಸೋರಿಕೆ ಮಾಡುತ್ತಿದ್ದಾರೆ. ಸರ್ಕಾರವು ಇದಕ್ಕಿಂತ ನೀಚತನವನ್ನು ತೋರಿಸಲು ಸಾಧ್ಯವಿಲ್ಲ' ಎಂದರು.




ಹೋರಾಟಗಾರ ಸೋನಮ್ ವಾಂಗ್‌ಚುಕ್ ಅವರನ್ನು ಬೆಂಬಲಿಸಿ AIDYO ಕಾರ್ಯಕರ್ತರು ಭಾನುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು. ಉಪವಾಸ ಸತ್ಯಾಗ್ರಹ 21ನೇ ದಿನಕ್ಕೆ ಕಾಲಿಟ್ಟಾಗ ದೆಹಲಿ ಪೊಲೀಸರು ಅವರನ್ನು 'ಬಲವಂತವಾಗಿ' ದೆಹಲಿಯ ಸಫ್ದರ್ಜಂಗ್ ಆಸ್ಪತ್ರೆಗೆ ಕರೆದೊಯ್ದರು.

# ಎಲ್ಲಾ ಸರ್ಕಾರಿ, ಖಾಸಗಿ ಆಸ್ಪತ್ರೆ, ಶಾಲಾ ಆವರಣದ ಕ್ಯಾಂಟೀನ್‌ಗಳಲ್ಲಿ ಜಂಕ್‌ಫುಡ್ ಮಾರಾಟ ನಿಷೇಧಿಸಿ: ಯು.ಟಿ. ಖಾದರ್ ಕರೆ

**ಬೆಂಗಳೂರು, ಜು.19–** ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಮತ್ತು ಶಾಲಾ ಆವರಣಗಳಲ್ಲಿರುವ ಕ್ಯಾಂಟೀನ್‌ಗಳಲ್ಲಿ ಜಂಕ್ ಫುಡ್ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲು ರಾಜ್ಯ ಸರ್ಕಾರ ಮಹತ್ವದ ಸಿದ್ಧತೆ ನಡೆಸಿದೆ. ಇನ್ನು ಮುಂದೆ ಈ ಆವರಣಗಳಲ್ಲಿ ಕೇವಲ ಪೌಷ್ಠಿಕ ಹಾಗೂ ಆರೋಗ್ಯಕರ ಆಹಾರಗಳನ್ನು ಮಾತ್ರ ಕಡ್ಡಾಯವಾಗಿ ಮಾರಾಟ ಮಾಡುವುದನ್ನು ಕಡ್ಡಾಯ ಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.



ಸಂಸ್ಕರಿಸಿದ ಆಹಾರಗಳ ಅತಿಯಾದ ಸೇವನೆಯಿಂದಾಗಿ ಸಣ್ಣ ವಯಸ್ಸಿನಲ್ಲೇ ಮಕ್ಕಳು ಹಾಗೂ ಸಾರ್ವಜನಿಕರು ಕ್ಯಾನ್ಸರ್, ಮೂತ್ರಪಿಂಡದ ತೊಂದರೆಗಳು ಸೇರಿದಂತೆ ಹಲವು ರೀತಿಯ ಸಾಂಕ್ರಾಮಿಕವಲ್ಲದ ಗಂಭೀರ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಹಂತದಲ್ಲೇ ಅಂದರೆ ಶಾಲೆ ಮತ್ತು ಆಸ್ಪತ್ರೆಗಳ ಮಟ್ಟದಲ್ಲೇ ಜಂಕ್ ಫುಡ್ ನಿಯಂತ್ರಕ್ಕೆ ತಂದರೆ, ಸಾರ್ವಜನಿಕರ ಹಾಗೂ ಮಕ್ಕಳ ದೈಹಿಕ ಆರೋಗ್ಯವನ್ನು ಉತ್ತಮವಾಗಿ ಕಾಪಾಡಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಹೊಸ ನಿಯಮದ ಅನ್ವಯ, ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಶಾಲೆಗಳ ಆವರಣ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬರ್ಗರ್, ಪಿಜ್ಜಾ, ಕಾರ್ಬೋನೇಟೆಡ್ ಪಾನೀಯ ಗಳು ಸೇರಿದಂತೆ ಆರೋಗ್ಯಕ್ಕೆ ಹಾನಿಕಾರಕವಾದ ಯಾವುದೇ ಜಂಕ್ ಫುಡ್ ಮಾರಾಟ ಮಾಡಲು ಅವಕಾಶ ವಿರುವುದಿಲ್ಲ. ಈ ಯೋಜನೆಯನ್ನು ಪ್ರಾಯೋಗಿಕವಾಗಿ ಮಂಗಳೂರಿನ ವೆನ್ಲಾಕ್ ಸರ್ಕಾರಿ ಆಸ್ಪತ್ರೆಯ ಕ್ಯಾಂಟೀನ್‌ನಿಂದಲೇ ಆರಂಭಿಸ ಲಾಗುತ್ತಿದ್ದು, ಇದು ರಾಜ್ಯದ ಇತರ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಮಾದರಿಯಾಗಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಈ ಕಟ್ಟುನಿಟ್ಟಿನ ನಿಯಮವನ್ನು ಜಾರಿಗೆ ತರಲು ಆಹಾರ ಮತ್ತು ಸುರಕ್ಷತಾ ಕಾಯ್ದೆಯನ್ನು ರಾಜ್ಯದಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ಅನುಷ್ಠಾನ ಗೊಳಿಸಲು ತೀರ್ಮಾನಿಸಲಾಗಿದೆ. ಕೇವಲ ಶಾಲೆ ಮತ್ತು ಆಸ್ಪತ್ರೆಗಳಷ್ಟೇ ಅಲ್ಲದೆ, ಪ್ರಮುಖ ಮಾಲ್‌ಗಳು ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ ಮಾರಾಟ ವಾಗುವ ಆಹಾರ ಪದಾರ್ಥಗಳ ಗುಣಮಟ್ಟವನ್ನೂ ಕಡ್ಡಾಯವಾಗಿ ನಿಯಮಿತ ತಪಾಸಣೆಗೆ ಒಳಪಡಿಸಲಾಗುವುದು. ಗುಣಮಟ್ಟ ರಹಿತ ಅಥವಾ ಆರೋಗ್ಯಕ್ಕೆ ಪೂರಕವಲ್ಲದ ಆಹಾರ ಪದಾರ್ಥ ಗಳನ್ನು ಮಾರಾಟ ಮಾಡುವ ಸಂಸ್ಥೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಎಚ್ಚರಿಕೆ ನೀಡಿದ್ದಾರೆ.

ಆಹಾರ ತಪಾಸಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ ಬೆಂಗಳೂರಿನಲ್ಲಿ ಸದ್ಯ ಚಾಲ್ತಿಯಲ್ಲಿರುವ ಆಹಾರ ಗುಣಮಟ್ಟ ತಪಾಸಣಾ ಪ್ರಯೋಗಾಲಯವನ್ನು ಪಿಪಿಪಿ (ಸಾರ್ವಜನಿಕ–ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಅತ್ಯುತ್ತಮ ಮಟ್ಟಕ್ಕೆ ಮೇಲ್ದರ್ಜೆಗೆ ಏರಿಸಲು ಸರ್ಕಾರ ಮುಂದಾಗಿದೆ.

ಈ ಪ್ರಯೋಗಾಲಯದಲ್ಲಿ ಪರೀಕ್ಷಿಸಲ್ಪಟ್ಟು ನೀಡಲಾಗುವ ವರದಿಗಳು ಕಾನೂನಾತ್ಮಕವಾಗಿ ಅತ್ಯುನ್ನತ ನ್ಯಾಯಾಲಯದಲ್ಲೂ ಸಾಬೀತಾಗುವಷ್ಟು ನಿಖರವಾಗಿರಲಿವೆ ಎಂದು ಸಚಿವರು ಮಾಹಿತಿ ನೀಡಿದರು. ಈ ಮೂಲಕ ರಾಜ್ಯದಲ್ಲಿ ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸಲು ಮತ್ತು ಮುಂದಿನ ಪೀಳಿಗೆಯನ್ನು ರೋಗಮುಕ್ತವಾಗಿಸಲು ಸರ್ಕಾರ ಬದ್ಧವಾಗಿದೆ ಎಂದು ಯು.ಟಿ. ಖಾದರ್ ಪುನರುಚ್ಚರಿಸಿದ್ದಾರೆ.

# ಅಜ್ಜಿಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ತುರ್ತು ಪೆರೋಲ್‌ಗೆ ಪ್ರಜ್ವಲ್ ಅರ್ಜಿ

**ಬೆಂಗಳೂರು, ಜು.19–** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಪತ್ನಿ ಚೆನ್ನಮ್ಮನವರ ನಿಧನದ ಹಿನ್ನೆಲೆಯಲ್ಲಿ ಅವರ ಮೊಮ್ಮಗ ಹಾಗೂ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ತುರ್ತು ಪೆರೋಲ್ ನೀಡುವಂತೆ ಜೈಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ.



ಪ್ರಸ್ತುತ ಅತ್ಯಾಚಾರ ಪ್ರಕರಣದಲ್ಲಿ ಜೀವಿತಾವಧಿ ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬಂಧಿ ಯಾಗಿರುವ ಪ್ರಜ್ವಲ್ ರೇವಣ್ಣ, ಅಜ್ಜಿಯ ಅಂತಿಮ ದರ್ಶನ ಪಡೆಯಲು ಹಾಗೂ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲು ವಿಶೇಷ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಕುಟುಂಬದ ಸದಸ್ಯರ ನಿಧನದಂತಹ ತುರ್ತು ಹಾಗೂ ಮಾನವೀಯ ಸಂದರ್ಭಗಳಲ್ಲಿ ಕೈದಿಗಳಿಗೆ ಪೆರೋಲ್ ನೀಡಲು ಕಾನೂನಿನಲ್ಲಿ ಅವಕಾಶವಿದ್ದು, ಇದೇ ನಿಯಮದಡಿ ಅರ್ಜಿಯನ್ನು ಪರಿಗಣಿಸು ವಂತೆ ಮನವಿ ಮಾಡಲಾಗಿದೆ.

ಪ್ರಜ್ವಲ್ ರೇವಣ್ಣ ಅವರ ಅರ್ಜಿಯ ಕುರಿತು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ಪರಿಶೀಲನೆ ನಡೆಸಲಿದ್ದು, ಕಾನೂನು ನಿಯಮಗಳು, ಭದ್ರತಾ ವ್ಯವಸ್ಥೆ ಹಾಗೂ ಸಂಬಂಧಿತ ಅಧಿಕಾರಿಗಳ ಅಭಿಪ್ರಾಯಗಳನ್ನು ಆಧರಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ.

ಪೆರೋಲ್ ಮಂಜೂರಾದರೆ, ಕಟ್ಟುನಿಟ್ಟಿನ ಪೊಲೀಸ್ ಭದ್ರತೆ ಯೊಂದಿಗೆ ಅಂತ್ಯಕ್ರಿಯೆ ಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯುವ ಸಾಧ್ಯತೆಯಿದೆ. ಇದೇ ವೇಳೆ, ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ತುರ್ತು ಪೆರೋಲ್ ಅರ್ಜಿಗೆ ಅನುಮತಿ ದೊರೆಯುತ್ತದೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಜೈಲಾಧಿಕಾರಿಗಳ ನಿರ್ಧಾರದ ಮೇಲೆ ಅವರು ಅಜ್ಜಿಯ ಅಂತಿಮ ದರ್ಶನ ಪಡೆಯುವ ಅವಕಾಶ ನಿರ್ಧಾರ ವಾಗಲಿದೆ.

# ಕೃತಕ ಬುದ್ಧಿಮತ್ತೆಯ ಸವಾಲು
## ಪ್ರೊ. ವೇಣುಗೋಪಾಲ್ ಪರಿಹಾರ ಸೂತ್ರ

**ಬೆಂಗಳೂರು,ಜು.19:** ಶರವೇಗದಲ್ಲಿ ಮಾನವ ಜೀವನವನ್ನು ವ್ಯಾಪಿಸುತ್ತಿರುವ ಕೃತಕ ಬುದ್ಧಿಮತ್ತೆಯ ಸವಾಲನ್ನು ಸಮರ್ಥವಾಗಿ ನಿಭಾಯಿಸಲು ಅದರೊಂದಿಗೆ ಸಮನ್ವಯ ಸಾಧಿಸುವು ದೊಂದೇ ಪರಿಹಾರ ಮಾರ್ಗವೆಂದು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಪ್ರತಿಪಾದಿಸಿದ್ದಾರೆ.

ಕೃತಕ ಬುದ್ಧಿಮತ್ತೆಯನ್ನು ಮಾನವ ಸಮಾಜದ ಪ್ರಗತಿಗೆ ಪರಿಣಾಮಕಾರಿ ಸಾಧನವಾಗಿ ಬಳಸುವ ಮೂಲಕ ಭವಿಷ್ಯದ ಪೀಳಿಗೆಯ ಬದುಕಿನಲ್ಲಿ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸಬಹುದು.ಮುಂದಿನ ನಾಲ್ಕೈದು ವರ್ಷಗಳಲ್ಲಿ ಎಲ್ಲ ರೀತಿಯ ಉದ್ಯೋಗ ಕ್ಷೇತ್ರಗಳನ್ನೂ ಕ್ವಾಂಟಂ ಕೃತಕ ಬುದ್ಧಿಮತ್ತೆ ಆವರಿಸಿ ಕೊಳ್ಳಬಹುದೆಂದು ತಿಳಿಸಿದ ಅವರು ಚೀನಾದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ವೈದ್ಯರಹಿತ ರೋಬೋ ನಿಯಂತ್ರಿತ ಆಸ್ಪತ್ರೆಯನ್ನು ಉದಾಹರಿಸಿದರು. ಸಂಘರ್ಷದಿಂದ ಸಹಕಾರ ಮತ್ತು ಸಹಭಾಗಿತ್ವದ ಹಂತ ದಾಟಿ ಇದೀಗ ಸ್ಪರ್ಧೆಯ ಘಟ್ಟ ತಲುಪಿರುವ ಆಧುನೀಕರಣದ ಐದನೇ ಕ್ರಾಂತಿ 2045ರ ವೇಳೆಗೆ ಮಾನವ–ಯಂತ್ರ ಏಕರೂಪತೆಯ ಸನ್ನಿವೇಶ ಸೃಷ್ಟಿಸುವುದೆಂದು ಎಂದರು.

ಮಾನವ ಸಾಮರ್ಥ್ಯದ ಉನ್ನತೀ ಕರಣದ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಸನ್ನದ್ಧರಾಗಬೇಕಿದೆ ಎಂದು ಎಚ್ಚರಿಸಿದ ಅವರು ಕೃತಕ ಬುದ್ಧಿಮತ್ತೆಯ ಮೇಲೆ ಹತೋಟಿ ಸಾಧಿಸುವ ಸೂಕ್ತ ನಿಯಂತ್ರಣ ಮಾರ್ಗಗಳನ್ನು ಕಂಡುಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು.

# ಹೋಂಸ್ಟೇಗೆ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಕಡ್ಡಾಯ ಪ್ರವಾಸೋದ್ಯಮ ಆಯುಕ್ತ ಡಾ.ರಾಮ್‌ಪ್ರಸಾತ್ ಮನೋಹರ್ ಸೂಚನೆ

**ಬೆಂಗಳೂರು ಜು.19:** ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಂದು ಹೋಂ ಸ್ಟೇಗಳೂ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಇದುವರೆಗೂ 500ಕ್ಕೂ ಹೆಚ್ಚು ಹೋಂಸ್ಟೇ ಮಾಲಕರು ನೋಂದಣಿಗಾಗಿ ಅರ್ಜಿಸಲ್ಲಿಸಿದ್ದು, ನೋಂದಣಿ ಮಾಡಿಸದಿರುವ ಎಲ್ಲಾ ಅರ್ಹ ಹೋಂಸ್ಟೇ ಮಾಲೀಕರು ವಿಳಂಬ ಮಾಡದೆ ಶೀಘ್ರವೇ ಪ್ರವಾಸೋದ್ಯಮ ಇಲಾಖೆಯ ಮೂಲಕ ಅಧಿಕೃತವಾಗಿ ನೋಂದಾ ಯಿಸಿಕೊಳ್ಳುವಂತೆ ಪ್ರವಾಸೋದ್ಯಮ ಇಲಾಖೆಯ ಆಯುಕ್ತರಾದ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.



ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು "ಕರ್ನಾಟಕ ಹೋಂಸ್ಟೇ ನೋಂದಣಿ ಮಾರ್ಗಸೂಚಿ–2025ಗೆ ಜಾರಿಗೆ ತಂದಿದ್ದು, ಇದಕ್ಕೆ ರಾಜ್ಯಾದ್ಯಂತ ಉತ್ತಮ ಸ್ಪಂದನ ವ್ಯಕ್ತವಾಗುತ್ತಿದೆ. ಈವರೆಗೂ 500ಕ್ಕೂ ಹೆಚ್ಚು ಹೋಂಸ್ಟೇ ಮಾಲೀಕರು ಅಧಿಕೃತ ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಕಾರ್ಯಾ ಚರಿಸುತ್ತಿರುವ ಪ್ರತಿಯೊಂದು ಹೋಂ ಸ್ಟೇಗೂ ನೋಂದಣಿ ಕಡ್ಡಾಯ ಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಇದುವರೆಗೂ ನೋಂದಣಿ ಮಾಡಿಸದಿರುವ ಎಲ್ಲಾ ಅರ್ಹ ಹೋಂಸ್ಟೇ ಮಾಲೀಕರು ವಿಳಂಬ ಮಾಡದೆ ಶೀಘ್ರವೇ ಪ್ರವಾಸೋದ್ಯಮ ಇಲಾಖೆಯ ಮೂಲಕ ಅಧಿಕೃತವಾಗಿ ನೋಂದಾಯಿಸಿಕೊಳ್ಳುವಂತೆ ಆಯುಕ್ತರು ಕರೆ ನೀಡಿದ್ದಾರೆ.

ಸ್ವೀಕೃತವಾಗಿರುವ ಅರ್ಜಿಗಳ ಪೈಕಿ ಈಗಾಗಲೇ 400 ಅರ್ಜಿಗಳ ದಾಖಲಾತಿ ಪರಿಶೀಲನೆ ಪೂರ್ಣಗೊಂಡಿದ್ದು, ಪ್ರಸಕ್ತ ಸ್ಥಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ. ಸಲ್ಲಿಕೆಯಾಗುವ ಪ್ರತಿ ಅರ್ಜಿಯನ್ನೂ ಪ್ರವಾಸೋದ್ಯಮ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಪಂಚಾಯಿತಿ / ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿಗಳನ್ನೊಳಗೊಂಡ ತಂಡವು ಕೂಲಂಕಷವಾಗಿ ಪರಿಶೀಲಿಸಿದ ಬಳಿಕವೇ ನೋಂದಣಿ ಪ್ರಮಾಣಪತ್ರ ವನ್ನು ವಿತರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪ್ರಮುಖವಾಗಿ ಮೂಲಸೌಕರ್ಯ, ಭದ್ರತೆ, ಸ್ವಚ್ಛತೆ ಹಾಗೂ ಕಾರ್ಯಾಚರಣೆಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಮೌಲ್ಯಮಾಪನ ಮಾಡಲಾಗುತ್ತಿದೆ. ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಕನಿಷ್ಠ ಮಾನದಂಡಗಳನ್ನು ಪೂರೈಸದ ಹೋಂಸ್ಟೇಗಳಿಗೆ ನೋಂದಣಿ ಮಾನ್ಯತೆ ನೀಡಲಾಗುವುದಿಲ್ಲ. ಅಂತಹವರು ಅಗತ್ಯ ಲೋಪಗಳನ್ನು ಸರಿಪಡಿಸಿ ಕೊಂಡು ಮರು–ಅರ್ಜಿ ಸಲ್ಲಿಸಬಹುದಾಗಿದೆ.

> **"ಗುಣಮಟ್ಟದ ಹಾಗೂ ಅತ್ಯಂತ ಸುರಕ್ಷಿತವಾದ ಹೋಂಸ್ಟೇಗಳ ಜಾಲವನ್ನು ನಿರ್ಮಿಸುವುದು ನಮ್ಮ ಇಲಾಖೆಯ ಪ್ರಧಾನ ಉದ್ದೇಶ. ನಿಗದಿತ ಮಾನದಂಡಗಳನ್ನು ಪೂರೈಸುವ ಹೋಂಸ್ಟೇಗಳಿಗೆ ಮಾತ್ರ ಮಾನ್ಯತೆ ನೀಡಲಾಗುತ್ತಿದೆ. ಇದರಿಂದ ಪ್ರವಾಸಿಗರಿಗೆ ವಿಶ್ವಾಸಾರ್ಹ ವಸತಿ ವ್ಯವಸ್ಥೆ ದೊರೆಯುವುದರ ಜೊತೆಗೆ, ರಾಜ್ಯದಲ್ಲಿ ಜವಾಬ್ದಾರಿಯುತ ಹಾಗೂ ಸುಸ್ಥಿರ ಪ್ರವಾಸೋದ್ಯಮಕ್ಕೆ ಇಂಬು ಸಿಗಲಿದೆ."**
> **– ಆಯುಕ್ತರು, ಪ್ರವಾಸೋದ್ಯಮ ಇಲಾಖೆ**

ಎಲ್ಲ ಹಂತದ ಪರಿಶೀಲನೆಗಳು ಮುಕ್ತಾಯ ಗೊಂಡು, ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ದೊರೆತ 45 ದಿನಗಳ ಒಳಗಾಗಿ ನೋಂದಣಿ ಪ್ರಮಾಣಪತ್ರ ವನ್ನು ನೀಡಲಾಗುತ್ತದೆ. ಈ ಪ್ರಮಾಣಪತ್ರವು ಐದು ವರ್ಷಗಳ ಕಾಲ ಮಾನ್ಯತೆ ಹೊಂದಲಿದ್ದು, ತದನಂತರ ನವೀಕರಿಸಿಕೊಳ್ಳುವುದು ಕಡ್ಡಾಯ.ಈ ಕಡ್ಡಾಯ ನೋಂದಣಿ ವ್ಯವಸ್ಥೆಯಿಂದಾಗಿ ರಾಜ್ಯದಲ್ಲಿನ ನೈಜ ಹೋಂಸ್ಟೇಗಳಿಗೆ ಸರಕಾರದ ಅಧಿಕೃತ ಮಾನ್ಯತೆ ದೊರೆಯಲಿದೆ. ಇದು ಪ್ರವಾಸಿಗರಿಗೆ ವಿಶ್ವಾಸಾರ್ಹ ಹಾಗೂ ಸುರಕ್ಷಿತ ವಸತಿ ವ್ಯವಸ್ಥೆಯನ್ನು ಒದಗಿಸುವುದರ ಜೊತೆಗೆ, ಇಲಾಖೆಯ ಮಟ್ಟದಲ್ಲಿ ಅಧಿಕೃತ ಡೇಟಾಬೇಸ್ ನಿರ್ವಹಿಸಲು ಸಹಕಾರಿಯಾಗಲಿದೆ. ನೋಂದಾಯಿತ ಹೋಂಸ್ಟೇಗಳು ಸರ್ಕಾರದ ಸುರಕ್ಷತಾ ಮತ್ತು ಕಾರ್ಯಾಚರಣಾ ಮಾರ್ಗಸೂಚಿ ಗಳನ್ನು ಚಾಚೂ ತಪ್ಪದೆ ಪಾಲಿಸ ಬೇಕಾಗುತ್ತದೆ ಎಂದು ಆಯುಕ್ತ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

"ನೂತನ ಮಾರ್ಗಸೂಚಿಗೆ ರಾಜ್ಯದ ಹೋಂಸ್ಟೇ ಮಾಲೀಕರಿಂದ ಅತ್ಯುತ್ತಮ ಸ್ಪಂದನ ದೊರೆಯುತ್ತಿದ್ದು, ಈಗಾಗಲೇ 500ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ನೋಂದಣಿಯನ್ನು ಕಡ್ಡಾಯಗೊಳಿಸಿರುವುದರಿಂದ, ಎಲ್ಲಾ ನಿರ್ವಾಹಕರು ಶೀಘ್ರವೇ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಇದರಿಂದ ಪ್ರವಾಸಿಗರಲ್ಲಿ ವಿಶ್ವಾಸ ವೃದ್ಧಿಯಾಗುವುದಲ್ಲದೆ, ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಮತ್ತಷ್ಟು ಬಲ ಬರಲಿದೆ ಎಂದರು.

# ಅನ್ನಭಾಗ್ಯ ಯೋಜನೆಯ ಪೂರೈಕೆ ಸರಪಳಿಯಲ್ಲಿನ ಅಕ್ರಮ ಪರಿಶೀಲಿಸಲು 27 ವಿಶೇಷ ತಂಡಗಳ ರಚನೆ

**ಬೆಂಗಳೂರು ಜು.19:** ರಾಜ್ಯದ ಅನ್ನಭಾಗ್ಯ ಯೋಜನೆಯಡಿ ನ್ಯಾಯ ಬೆಲೆ ಅಂಗಡಿಗಳಿಗೆ ಪೂರೈಕೆ ಯಾಗುತ್ತಿರುವ ಅಕ್ಕಿಯ ಗುಣಮಟ್ಟ ಹಾಗೂ ಪೂರೈಕೆ ಸರಪಳಿಯಲ್ಲಿನ ಅಕ್ರಮಗಳನ್ನು ಪರಿಶೀಲಿಸಲು ಲೋಕಾಯುಕ್ತ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಅಡಿಯಲ್ಲಿ ಬಡ ಜನರಿಗೆ ನೀಡಬೇಕಾದ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಉಂಟಾಗುತ್ತಿರುವ ಅಕ್ರಮಗಳು, ಆಡಳಿತ ವೈಫಲ್ಯ ಹಾಗೂ ಸರ್ಕಾರದ ಬೊಕ್ಕಸಕ್ಕೆ ಉಂಟಾಗುತ್ತಿರುವ ನಷ್ಟವನ್ನು ಪರಿಶೀಲಿಸಿ, ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯ ಶಿಫಾರಸುಗಳನ್ನು ಈ ಸಮಿತಿ ಸಲ್ಲಿಸಲಿದೆ.




ಲೋಕಾಯುಕ್ತ ಪ್ರಕಟಣೆ ಪ್ರಕಾರ, ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಮುಖ್ಯಸ್ಥ ಹರ್ಷ ಗುಪ್ತಾ ಸಮಿತಿಯ ಅಧ್ಯಕ್ಷರಾಗಿದ್ದು, ಕರ್ನಾಟಕ ಲೋಕಾ ಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಕನಗವಲ್ಲಿ ಸದಸ್ಯರಾಗಿದ್ದಾರೆ.ತನಿಖೆಯ ವೇಳೆ ಬೆಳಕಿಗೆ ಬಂದಿರುವ ಪ್ರಾಥಮಿಕ ಅಕ್ರಮಗಳು, ಅವ್ಯವಹಾರಗಳು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯವೈಖರಿಯನ್ನು ಸುಧಾರಿಸಲು ಅಗತ್ಯ ಕ್ರಮಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಆಗಸ್ಟ್ 20ರೊಳಗೆ ಲೋಕಾಯುಕ್ತಕ್ಕೆ ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ (ಕೆಎಫ್‌ಸಿಎಸ್‌ಸಿ) ಸಗಟು ಗೋದಾಮುಗಳ ವ್ಯವಸ್ಥಾಪಕರು ಹಾಗೂ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘಗಳ ಗೋದಾಮುಗಳ ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ (ಸುವೋ ಮೋಟೋ) ಪ್ರಕರಣ ದಾಖಲಿಸಿದ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಉಪ ಲೋಕಾ ಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹಾಗೂ ನ್ಯಾಯಮೂರ್ತಿ ಬಿ. ವೀರಪ್ಪ ಅವರ ನೇತೃತ್ವದಲ್ಲಿ 27 ವಿಶೇಷ ತಂಡಗಳನ್ನು ರಚಿಸಲಾಗಿತ್ತು.

ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಹಾಗೂ ನ್ಯಾಯಾಂಗ ಅಧಿಕಾರಿಗಳನ್ನು ಒಳಗೊಂಡ ಈ ತಂಡಗಳು ಜೂನ್ 12ರಂದು ರಾಜ್ಯದ ವಿವಿಧ ನ್ಯಾಯಬೆಲೆ ಅಂಗಡಿಗಳು, ಕೆಎಫ್‌ಸಿಎಸ್‌ಸಿ ಸಗಟು ಗೋದಾಮುಗಳು ಹಾಗೂ ತಾಲ್ಲೂಕು ಮಟ್ಟದ ಗೋದಾಮುಗಳ ಮೇಲೆ ದಿಢೀರ್ ಪರಿಶೀಲನೆ ನಡೆಸಿದ್ದವು.ಈ ಪರಿಶೀಲನೆ ಹಾಗೂ ನಂತರದ ತನಿಖೆಯಲ್ಲಿ ಅನ್ನಭಾಗ್ಯ ಅಕ್ಕಿಯ ಸಂಗ್ರಹ, ಸಾಗಣೆ, ಪೂರೈಕೆ ಹಾಗೂ ವಿತರಣಾ ವ್ಯವಸ್ಥೆಯಲ್ಲಿ ಹಲವು ಅಕ್ರಮಗಳು ಮತ್ತು ಲೋಪಗಳು ಬೆಳಕಿಗೆ ಬಂದಿವೆ ಎಂದು ಲೋಕಾಯುಕ್ತ ತಿಳಿಸಿದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥೆಯನ್ನು ಪಾರದರ್ಶಕ ಹಾಗೂ ಪರಿಣಾಮಕಾರಿಯಾಗಿ ರೂಪಿಸಲು ಸಮಿತಿ ಶಿಫಾರಸುಗಳನ್ನು ಸಲ್ಲಿಸಲಿದೆ.

# ಕಾಂಗ್ರೆಸ್ ಪಾಳಯದಲ್ಲಿ ಸಚಿವ ಸಂಪುಟ ವಿಸ್ತರಣೆಯ ತೀವ್ರ ಕಸರತ್ತು

**ಬೆಂಗಳೂರು, ಜು.19–** ರಾಜ್ಯದಲ್ಲಿ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯ ಕಸರತ್ತು ತೀವ್ರಗೊಂಡಿದ್ದು ಕಾಂಗ್ರೆಸ್ ಪಾಳಯದಲ್ಲಿ ಭಿನ್ನಮತ ಮತ್ತು ಗೊಂದಲಗಳ ಗೂಡಾಗಿ ಪರಿಣಮಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದ ಸಂಪುಟದ 'ಖಾದ್ಯ' ಸಿದ್ಧಪಡಿಸಲು ಹಲವು ಬಾಣಸಿಗರು ಮುಗಿಬಿದ್ದಿರುವು ದರಿಂದ ಇಡೀ ಪ್ರಕ್ರಿಯೆ ಮತ್ತಷ್ಟು ಜಟಿಲಗೊಂಡಿದ್ದು, ಸೋಮವಾರದಿಂದ ಹೊಸ ಹಂತದ ಚರ್ಚೆಗಳು ಆರಂಭವಾಗಲಿವೆ.

ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಯಾಗಿದ್ದ ಅವಧಿ ಯಲ್ಲಿ ರಾಜ್ಯದಿಂದ ಕೇವಲ ಎರಡು ಪಟ್ಟಿಗಳು ಮಾತ್ರ ಹೈಕಮಾಂಡ್ಗೆ ಸಲ್ಲಿಕೆಯಾಗುತ್ತಿದ್ದವು. ಅದಕ್ಕೆ ದೆಹಲಿ ನಾಯಕರು ಕೆಲ ಹೆಸರು ಗಳನ್ನು ಸೇರಿಸಿ ಅಂತಿಮಗೊಳಿಸು ತ್ತಿದ್ದರು. ಆದರೆ ಈ ಬಾರಿ ಪರಿಸ್ಥಿತಿ ಬದಲಾಗಿದೆ. ರಾಜ್ಯದಿಂದಲೇ ಮೂರು ಪ್ರತ್ಯೇಕ ಪಟ್ಟಿಗಳು ಸಲ್ಲಿಕೆಯಾಗಿದ್ದರೆ, ಹೈಕಮಾಂಡ್ ವಲಯ ದಿಂದಲೂ ಎರಡಕ್ಕೂ ಹೆಚ್ಚು ಪಟ್ಟಿಗಳು ಸಿದ್ಧವಾಗಿವೆ. ಹೀಗಾಗಿ ದೆಹಲಿಯಲ್ಲಿ ನಡೆದ ಎರಡು ದಿನಗಳ ಸುದೀರ್ಘ ಚರ್ಚೆಯಲ್ಲೂ ನಾಯಕರ ನಡುವೆ ಒಮ್ಮತ ಮೂಡಿಬಂದಿಲ್ಲ.ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಮ್ಮ ಬೆಂಬಲಿಗರ ಪ್ರತ್ಯೇಕ ಪಟ್ಟಿಯೊಂದಿಗೆ ದೆಹಲಿ ತಲುಪಿದ್ದರೆ, ಇತ್ತ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಕೂಡ ತಮ್ಮದೇ ಆದ ಹೆಸರುಗಳೊಂದಿಗೆ ಸಜ್ಜಾಗಿದ್ದರು.

ಈ ಎಲ್ಲಾ ಪಟ್ಟಿಗಳ ನಡುವೆ ತಾಳಮೇಳವಿಲ್ಲದ ಕಾರಣ, ಪರಿಷ್ಕೃತ ಪಟ್ಟಿ ನೀಡುವಂತೆ ಹೈಕಮಾಂಡ್ ರಾಜ್ಯ ನಾಯಕರಿಗೆ ಸೂಚಿಸಿದೆ.

ಹಿಂದಿನ ಸಂಪ್ರದಾಯದಂತೆ ಸಂಪುಟದ ಶೇ.75ರಷ್ಟು ಸ್ಥಾನಗಳನ್ನು ತುಂಬುವ ಅಧಿಕಾರ ಮುಖ್ಯಮಂತ್ರಿಗೆ ಇರುತ್ತಿತ್ತು. ಆದರೆ ಈ ಬಾರಿ ಆ ನಿಯಮ ಬದಲಾಗುತ್ತಿರುವುದಕ್ಕೆ ಸಿಎಂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಮುಂದೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಮತ್ತೊಂದೆಡೆ, ರಾಹುಲ್ ಗಾಂಧಿ ಅವರ ಸೂಚನೆಯಂತೆ ಸಿಎಂ ಸ್ಥಾನ ಬಿಟ್ಟುಕೊಟ್ಟಿರುವ ಸಿದ್ದರಾಮಯ್ಯ ಅವರು, ತಮ್ಮ ನಿಷ್ಠಾವಂತ ಬೆಂಬಲಿಗರಿಗೆ ಸಚಿವ ಸ್ಥಾನ ಕೊಡಿಸಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ಇವರ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹಾಗೂ ಹೈಕಮಾಂಡ್ ನಾಯಕರ ಕೋಟಾಗಳೂ ಸೇರಿರುವುದರಿಂದ ಯಾರನ್ನು ಕೈ ಬಿಡಬೇಕು ಎಂಬುದು ಯಕ್ಷಪ್ರಶ್ನೆಯಾಗಿದೆ.

# ಪತ್ರಕರ್ತನಲ್ಲಿ ಬಂಡಾಯಗಾರನಿಲ್ಲದಿದ್ದರೆ ಆತ ಗುಮಾಸ್ತನಂತೆ: ಇಂದೂಧರ ಹೊನ್ನಾಪುರ

**ಬೆಂಗಳೂರು,ಜು. 19:** ಪತ್ರಕರ್ತ ರಾದವರಲ್ಲಿ ಒಬ್ಬ ಬರಹಾರಗಾರ, ಬಂಡಾಯ, ಚಳವಳಿಗಾರನಿರಬೇಕು. ಅಂತಹ ಎಲ್ಲಾ ಗುಣಗಳನ್ನು ಒಳಗೊಂಡಿರುವ ಬಹುಮುಖ ಪ್ರತಿಭೆ ಎನ್‌ಎಸ್ ಶಂಕರ್. ಅವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ವಿಶೇಷ ಛಾಪು ಮೂಡಿಸಿದ ಮಹಾನ್ ಚೇತನ ಎಂದು ಹಿರಿಯ ಚಿಂತಕ, ಪತ್ರಕರ್ತ ಇಂದೂಧರ ಹೊನ್ನಾಪುರ ತಿಳಿಸಿದರು.



ನಗರದಲ್ಲಿ ಪ್ರೆಸ್‌ಕ್ಲಬ್ ಆಫ್ ಬೆಂಗಳೂರಿನಲ್ಲಿ ನಡೆದ ಎನ್. ಎಸ್.ಶಂಕರ್ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂಗಾರು ಪತ್ರಿಕೆಯ ಜೊತೆ ಶಂಕರ್ ಒಡನಾಟವನ್ನು ಸ್ಮರಿಸಿಕೊಂಡರು. ಶಂಕರ್ ಹಲವರ ಜೊತೆಗೆ ಉತ್ತಮ ಒಡನಾಟವಿಟ್ಟುಕೊಂಡಿದ್ದವರು. ಸಾಕಷ್ಟು ಮಂದಿ ಇವರಿಂದ ಪ್ರಭಾವಿತರಾಗಿದ್ದಾರೆ ಎಂದರು.

ಶಂಕರ್ ಅವರು ಸೃಜನಶೀಲ ಮನಸ್ಸುಳ್ಳವರು, ನೇರ, ನುಡಿಗಳ ಮೂಲಕ ಹಲವರ ಮನಸೆಳೆದಿದ್ದರು. ಎಲ್ಲರೊಂದಿಗೆ ಬೆರೆಯುವ ಗುಣಸ್ವಭಾವವನ್ನು ಬೆಳೆಸಿಕೊಂಡಿದ್ದರು. ಆದಮ್ಯ ಉತ್ಸಾಹದಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಇವರು ಇತರರಿಗೆ ಪ್ರೇರಣೆ ಕೂಡ ಆಗಿದ್ದರು. ಇವರು ಪತ್ರಿಕಾ ರಂಗಕ್ಕೆ ಕ್ರಿಯಾಶೀಲತೆಯನ್ನು ತಂದುಕೊಟ್ಟರು ಎಂದು ಹೇಳಿದರು.

ಹಿರಿಯ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ಶಂಕರ್ ಬಹಳ ನಿಷ್ಠೂರಿ, ಎಲ್ಲ ವಿಚಾರಗಳ ಬಗೆಗೆ ಕೂಲಂಕಷವಾಗಿ ತಿಳಿದು ಕೊಂಡಿದ್ದರು. ಹಲವು ಭಾಷೆಗಳ ಕವಿಗಳ ಬಗ್ಗೆ ತಿಳಿದು ಕೊಂಡಿದ್ದರು. ಮುಖ್ಯವಾಗಿ ತೊಲ್‌ಸ್ತೋಯ್ ಅವರ ಒಟ್ಟಾರೆ ಸಾಹಿತ್ಯವನ್ನು ಮನನ ಮಾಡಿಕೊಂಡಿದ್ದ ಇವರು ನಿರರ್ಗಳ ವಾಗಿ ತೊಲ್‌ಸ್ತೋಯ್ ಬಗ್ಗೆ ವಿಶ್ಲೇಷಿಸುವ ಚಾಕಚಕ್ಯತೆಯನ್ನು ಗಳಿಸಿಕೊಂಡಿದ್ದರು. ಶಂಕರ್‌ಗೆ ಗಾಂಧಿಯಾದಿಯಾಗಿದ್ದ ತನ್ನ ತಂದೆ ಪ್ರೇರಣೆಯಾಗಿದ್ದರು. ತಂದೆಯ ಆದರ್ಶನಗಳನ್ನು ಸದಾ ಸ್ಮರಿಸುತ್ತಿದ್ದರಲ್ಲದೇ ಸಾಹಿತ್ಯದ ಮೂಲಕವೂ ಅದನ್ನು ನಾಡಿನ ಜನರಿಗೆ ಪರಿಚಯಿಸಿದ್ದಾರೆ ಎಂದರು.

> **ಶಂಕರರ ಜೊತೆಗಿನ ವೃತ್ತಿ ಬದುಕಿನ ಕ್ಷಣಗಳನ್ನು ಮರೆಯಲು ಸಾಧ್ಯವಿಲ್ಲ. ಇವರ ಹೆಸರಿನಲ್ಲಿ ಆಸಕ್ತಿ ಇರುವ ಗ್ರಾಮಾಂತರ ಬಡ ಯುವಕರಿಗೆ ಸಾಹಿತ್ಯ, ನಾಟಕ, ಸಿನಿಮಾ ಬಗ್ಗೆ ಶಿಕ್ಷಣ ನೀಡಲು ತರಬೇತಿ ಕೇಂದ್ರ ಪ್ರಾರಂಭಿಸಲು ಮುಂದಾಗುವೆ.**
> **–ಕೋಟಿಗಾನಹಳ್ಳಿ ರಾಮಯ್ಯ, ಹಿರಿಯ ರಂಗಕರ್ಮಿ.**



ಚಲನಚಿತ್ರ ನಟ ರಮೇಶ್ ಅರವಿಂದ್ ಮಾತನಾಡಿ, ನನ್ನ ನೆನಪಿನಲ್ಲಿ ಇರುವ ಶಂಕರ್ ಎಂದರೆ ನಗು. ಉಲ್ಟಾಪಲ್ಟಾ ಸಿನಿಮಾದ ನೂರಿಪ್ಪತ್ತು ಪುಟದ ಬೌಂಡ್ ಸ್ಕ್ರಿಪ್ಟ್ ತಂದಿದ್ದರು. ಅಂತಹ ಸ್ಕ್ರಿಪ್ಟ್ ನಾನು ನೋಡಿದ್ದು ಅದೇ ಮೊದಲು. ಸ್ಕ್ರಿಪ್ಟ್‌ನಲ್ಲಿ ಏನಿತ್ತೋ ಅದನ್ನೇ ಚಿತ್ರೀಕರಣ ಮಾಡುವ ಕೌಶಲ್ಯ ಅವರಲ್ಲಿತ್ತು. ಅದನ್ನು ಕೂಡ ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸುವ ಬದ್ಧತೆ ಅವರದಾಗಿತ್ತು.

ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಮಾಜಿ ಅಧ್ಯಕ್ಷ ಎಂ.ಎ.ಪೊನ್ನಪ್ಪ, ಹಿರಿಯ ಚಿಂತಕ ಜಿ.ರಾಮಕೃಷ್ಣ, ಪ್ರಮುಖರಾದ ವಿ.ಮನೋಹರ್, ವಿ.ಎಲ್.ನರಸಿಂಹ ಮೂರ್ತಿ, ಕೆ.ಪುಟ್ಟಸ್ವಾಮಿ, ವಾರ್ತಾ ಇಲಾಖೆ ನಿವೃತ್ತ ನಿರ್ದೇಶಕ ಎನ್.ಆರ್. ವಿಶುಕುಮಾರ್, ಪತ್ರಕರ್ತರಾದ ದಿನೇಶ್ ಅಮೀನ್‌ಮಟ್ಟು, ನಾಗೇಶ್ ಕಾಳೇನಹಳ್ಳಿ, ಬಿ. ಬಸವರಾಜು, ಮುಮ್ತಾಜ್ ಅಲೀಂ, ಶಿವಾಜಿ ಗಣೇಶನ್, ರಾಘವೇಂದ್ರ ತೊಗರ್ಸಿ, ನಂಜುಂಡಪ್ಪವಿ, ಚಂದ್ರಶೇಖರ ಬೆಳಗೆರೆ, ವೆಂಕಟೇಶ್ ಪ್ರಸಾದ್, ಡಾ.ಎಲ್.ಎಂ.ಪ್ರದೀಪ್, ಚಿತ್ರನಟಿ ಸುಷ್ಮಾವೀರ್, ಕೆ.ಎ.ಎಸ್ ಅಧಿಕಾರಿ ಅರದೇಶಹಳ್ಳಿ ವೆಂಕಟೇಶ್, ರಾಹುಲ್ ಶಂಕರ್ ಇತರರಿದ್ದರು. ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ದನ್ – ಜನ್ನಿ ಗೀತೆಗಳನ್ನು ಹಾಡಿ ಎನ್.ಎಸ್. ಶಂಕರ್ ಅವರನ್ನು ನೆನಪು ಮಾಡಿ ಕೊಂಡರು.



ಬೆಂಗಳೂರಿನ ಯಶವಂತಪುರದಲ್ಲಿ ಭಾನುವಾರ SIR ಪ್ರಕ್ರಿಯೆಯಲ್ಲಿ ಜನರು ಗಣತಿ ನಮೂನೆಗಳನ್ನು ಸಲ್ಲಿಸಿದರು.

# 32 ಸಾವಿರ ಹುದ್ದೆ ಭರ್ತಿಗೆ ಶುಕ್ರದೆಸೆ, ಕಲ್ಯಾಣ ಕರ್ನಾಟಕದ ನಿರುದ್ಯೋಗಿಗಳಲ್ಲಿ ಗರಿಗೆದರಿದ ನಿರೀಕ್ಷೆ

**ಕಲಬುರಗಿ, ಜು.19:** ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಪ್ರಕ್ರಿಯೆ ಶುರುವಾಗುತ್ತಿದ್ದಂತೆಯೇ, ಸಂವಿಧಾನದ 371–ಜೆ ಅಡಿ ಭಾರಿ ಸಂಖ್ಯೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಆಯ್ಕೆಯಾಗಲು ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗ ಆಕಾಂಕ್ಷಿಗಳಲ್ಲಿ ನಿರೀಕ್ಷೆಗಳು ಗರಿಗೆದರಿವೆ. ಸರಕಾರದ 371ಜೆ ವಿಶೇಷ ಕೋಶ ನೀಡಿರುವ ಅಧಿಕೃತ ಅಂಕಿ ಅಂಶಗಳ ಪ್ರಕಾರ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 32,699 ಹುದ್ದೆಗಳು ಖಾಲಿ ಇರುವುದನ್ನು ಗುರುತಿಸಲಾಗಿದೆ. ಈ ಎಲ್ಲ ಹುದ್ದೆಗಳ ನೇಮಕಾತಿ ನಡೆಯಲಿದೆ ಎಂದು ಹೇಳಲಾಗಿದೆ.

ಕಳೆದ ಹಲವು ವರ್ಷಗಳಿಂದ ನೇಮಕಾತಿಗಳೇ ನಡೆಯದ್ದರಿಂದ ನೇಮಕಾತಿಗೆ ಚಾತಕಪಕ್ಷಿಯಂತೆ ಕಾಯುತ್ತಿದ್ದ ಯುವಕರಲ್ಲಿ ಈಗ ಹೊಸ ಆಶಾಭಾವನೆ ಮೂಡಿದೆ. ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳಲ್ಲಿ ತರಬೇತಿಯೂ ಶುರುವಾಗಿದೆ. ಈ ಭಾಗದಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ವಾಗ್ದಾನ ನೀಡಿತ್ತು. ಇದಕ್ಕಾಗಿ ಈ ಭಾಗಕ್ಕೆ ಪ್ರತ್ಯೇಕವಾದ 'ಗ್ಯಾರಂಟಿ' ಸಹ ನೀಡಿತ್ತು.

ಕಲಬುರಗಿಯಲ್ಲಿ ಎರಡು ಬಾರಿ ನಡೆದಿದ್ದ ವಿಶೇಷ ಸಚಿವ ಸಂಪುಟ ಸಭೆಯಲ್ಲೂ ಖಾಲಿ ಹುದ್ದೆಗಳ ಭರ್ತಿ ಬಗ್ಗೆ ನಿರ್ಧಾರ



ಕೈಗೊಳ್ಳಲಾಗಿತ್ತು. ಈಗ ಹುದ್ದೆ ಭರ್ತಿ ಪ್ರಕ್ರಿಯೆಗೆ ಚಾಲನೆ ದೊರಕಿದೆ. ಸಂವಿಧಾನದ ಮೀಸಲಾತಿ ಪ್ರಕಾರ, ಕಲ್ಯಾಣ ಕರ್ನಾಟಕದ ಒಟ್ಟು ಹುದ್ದೆಗಳಲ್ಲಿ ಗ್ರೂಪ್ 'ಎ' 1,695, ಗ್ರೂಪ್ 'ಬಿ' 1,779, ಗ್ರೂಪ್ 'ಸಿ' 21,755 ಮತ್ತು 'ಡಿ' ಗ್ರೂಪ್‌ನ 7,535 ಹುದ್ದೆಗಳು ಖಾಲಿ ಇವೆ. 'ಎ' ಕಿರಿಯ ಶ್ರೇಣಿ ಅಥವಾ 'ಬಿ' ಗ್ರೂಪ್‌ಗೆ ಶೇ 75, 'ಸಿ'ಗೆ ಶೇ 80 ಮತ್ತು 'ಡಿ' ಗ್ರೂಪ್‌ಗೆ ಶೇ 85ರಷ್ಟು ಹುದ್ದೆಗಳು ಕಲ್ಯಾಣ ಕರ್ನಾಟಕ ಭಾಗದವರಿಗೆ ಮೀಸಲು ಸಿಗಲಿದೆ. ಉಳಿದ ಮೀಸಲಾತಿ ಕ್ರಮವಾಗಿ ಶೇ 25, ಶೇ 20 ಮತ್ತು ಶೇ 15ರಷ್ಟು ಹುದ್ದೆಗಳಿಗೆ ರಾಜ್ಯದ ಇತರ ಭಾಗದವರಿಗೆ ಮೀಸಲಾತಿ ಸಿಗಲಿದೆ.

**ಹುದ್ದೆ ಭರ್ತಿಗೆ ಅಧಿಸೂಚನೆ :** 1,16,753 ; ನೇರ ನೇಮಕಾತಿ ಅಡಿಯಲ್ಲಿ ಗುರುತಿಸಿರುವ ಒಟ್ಟು ಹುದ್ದೆಗಳು 79,383 –ಈಗಾಗಲೇ ಭರ್ತಿ ಆಗಿರುವ ಹುದ್ದೆಗಳು 4,586– ಆಯ್ಕೆ ಪ್ರಕ್ರಿಯೆ ಬಾಕಿ ಇರುವ ವಿವರ: (ಕೆಪಿಎಸ್ ಸಿ+ಕೆಇಎ) 32,699– ನೇಮಕಾತಿ ಆಗಬೇಕಿರುವ ಹುದ್ದೆಗಳು.

ಶಿಕ್ಷಣ ಇಲಾಖೆಯಲ್ಲೇ 10 ಸಾವಿರ ಹುದ್ದೆ ಖಾಲಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 32 ಸಾವಿರ ಹುದ್ದೆಗಳು ಖಾಲಿ ಇದ್ದರೂ ಇವುಗಳಲ್ಲಿ ಶಿಕ್ಷಣ ಇಲಾಖೆಯಲ್ಲೇ ಅತ್ಯಧಿಕ ಅಂದರೆ 10,807 ಹುದ್ದೆಗಳು ಖಾಲಿ ಇವೆ. ಇದರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳು ಹೆಚ್ಚಿವೆ. ಶಿಕ್ಷಕರು ಮತ್ತು ಶಿಕ್ಷಣ ಇಲಾಖೆಯಲ್ಲಿ ಭಾರಿ ಪ್ರಮಾಣದಲ್ಲಿ ಹುದ್ದೆಗಳೂ ಖಾಲಿ ಇರುವುದರಿಂದ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಕಲ್ಯಾಣ ಭಾಗದ ಜಿಲ್ಲೆಗಳೇ ಪ್ರತಿ ವರ್ಷವೂ ಕೊನೆ ಸ್ಥಾನ ಪಡೆಯುತ್ತಿವೆ. ಈ ಹುದ್ದೆಗಳು ಭರ್ತಿಯಾದರೆ ಶಿಕ್ಷಣ ವ್ಯವಸ್ಥೆ ಸುಧಾರಣೆಯಾಗಲಿದೆ ಎನ್ನುತ್ತಾರೆ ಶಿಕ್ಷಣ ತಜ್ಞರು.


ನಮ್ಮ ಭಾಗದ ಯುವಕರಿಗೆ ನೇಮಕಾತಿಯಲ್ಲಿ ಯಾವುದೇ ಅನ್ಯಾಯ ಆಗದಂತೆ ನೋಡಿಕೊಳ್ಳಲಾಗುವುದು ಎಂದಿದ್ದಾರೆ ಜಿಲ್ಲಾ ಉಸ್ತುವಾರಿ ಮತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆ, 371–ಜೆ ಸಂಪುಟ ಉಪ ಸಮಿತಿ ಅಧ್ಯಕ್ಷರು.

# ಬೀದರ ನೀರಿನ ಸೆಲೆ ಹೊಂದಿರುವ ಕರೇಜ್ ಮೇಲೆಲ್ಲಾ ಆಟಾಟೋಪ; ಜಿಲ್ಲಾಡಳಿತದ ನಿರ್ಲಕ್ಷ್ಯ

**ಬೀದರ್, ಜು. 19:** ಜಿಲ್ಲಾಡಳಿತವು 'ಕರೇಜ್' ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿರುವುದರಿಂದ ಕರೇಜ್ ಇರುವ ಜಾಗದಲ್ಲಿ ವಿವಿಧ ರೀತಿಯ ಚಟುವಟಿಕೆಗಳು ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿವೆ. ಇದರಿಂದಾಗಿ ಸುರಂಗ ಕಾಲುವೆಗಳು ಕುಸಿದು ಬೀಳುವ ಸಾಧ್ಯತೆಗಳಿವೆ ಎನ್ನಲಗುತ್ತಿದೆ.

ಕಳೆದ ಕೆಲವು ತಿಂಗಳುಗಳ ಹಿಂದೆ 'ಕರೇಜ್' ಮುಖ್ಯ ದ್ವಾರ ಇರುವ ನೌಬಾದ್ ಬಳಿಯ ಅಲಿಯಾಬಾದ್‌ನಲ್ಲಿ ದೇವಸ್ಥಾನದ ಕಾಮಗಾರಿಗೆ ನೆಲ ಅಗೆಯಲಾಗಿತ್ತು. ಈ ಕುರಿತು ವರದಿ ಪ್ರಕಟಿಸಿದ ಬಳಿಕ ಅಲ್ಲಿ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಆದರೆ, ಈಗ ಕರೇಜ್ ಹಾದು ಹೋಗಿರುವ ಜಾಗದಲ್ಲೆಲ್ಲಾ ಬೇಕಾಬಿಟ್ಟಿ ಚಟುವಟಿಕೆಗಳು ನಡೆಯುತ್ತಿದ್ದು, ಸ್ಮಾರಕ ಪ್ರಿಯರ ಕಳವಳಕ್ಕೆ ಕಾರಣವಾಗಿದೆ.

ಅಲಿಯಾಬಾದ್ ಸಿದ್ದೇಶ್ವರ ದೇವಸ್ಥಾನ ಸಮೀಪದಿಂದ ಭಾಲ್ಕಿ ರಸ್ತೆಯ ಕಡೆಗೆ ಚಾಚಿಕೊಂಡಿರುವ ಕರೇಜ್ ಮಾರ್ಗದ ಮೇಲೆಲ್ಲಾ ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದೆ. ಇತ್ತೀಚೆಗೆ ಈ ಭಾಗದಲ್ಲಿ ರಸ್ತೆ ವಿಸ್ತರಣೆ ಕಾರ್ಯ ಕೂಡ ಕೈಗೆತ್ತಿಕೊಂಡಿದ್ದು, ಕೆಲವು ವಿದ್ಯುತ್



ಕಂಬಗಳನ್ನು ಕರೇಜ್ ಮೇಲ್ಭಾಗದಲ್ಲಿಯೇ ಹಾಕಲಾಗಿದೆ. ಇದರಿಂದಾಗಿ ನಿಧಾನವಾಗಿ ಅವುಗಳು ನೆಲದೊಳಗೆ ಕುಸಿಯುತ್ತಿವೆ. ಇದರಿಂದ ಕರೇಜ್ ಮೂಲ ಸ್ವರೂಪಕ್ಕೆ ಧಕ್ಕೆ ಬಂದೊದಗುವ ಆತಂಕ ಎದುರಾಗಿದೆ.

ಕರೇಜ್ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು 'ಟೀಮ್ ಯುವಾ' ಸೇರಿದಂತೆ ಕೆಲ ಸಂಘಟನೆಗಳು ಧ್ವನಿ ಎತ್ತಿದ್ದರಿಂದ ಜಿಲ್ಲಾಡಳಿತವು ಹೋದ ವರ್ಷ ಅದು ಹಾದು ಹೋಗಿರುವ ಜಾಗದಲ್ಲೆಲ್ಲಾ ಕಲ್ಲುಗಳನ್ನು ನೆಟ್ಟು, ಬಫರ್ ಜೋನ್ ಗುರುತಿಸಿತ್ತು. ಆದರೆ, ಈಗ ಅದೇ ಜಾಗದಲ್ಲಿ ರಾಜಾರೋಷವಾಗಿ ಕೆಲಸಗಳು ನಡೆಯುತ್ತಿದ್ದರೂ ಯಾರೊಬ್ಬರೂ ತಡೆಯುವ ಕೆಲಸ ಮಾಡುತ್ತಿಲ್ಲ ಎನ್ನುವುದು ಜನರ ಅಳಲು.

'ಕರೇಜ್ 'ವೆಂಟ್'ಗಳಿರುವ ಜಾಗದಲ್ಲಿ ಅನೇಕ ಕಡೆಗಳಲ್ಲಿ ವಿದ್ಯುತ್ ಕಂಬಗಳನ್ನು ಹಾಕಲಾಗಿದೆ. ಕೆಲವರು ಬೋರ್‌ವೆಲ್ ಕೂಡ ಹಾಕಿಸಿದ್ದಾರೆ. ಹೀಗಾದರೆ ಕರೇಜ್ ಅಸ್ತಿತ್ವಕ್ಕೆ ದೊಡ್ಡ ಧಕ್ಕೆ ಉಂಟಾಗಬಹುದು. ತಕ್ಷಣವೇ ಅದರ ರಕ್ಷಣೆಗೆ ಮುಂದಾಗಬೇಕು' ಎಂದು 'ಟೀಮ್ ಯುವಾ' ಸಂಚಾಲಕರೂ ಆದ ಸಾಮಾಜಿಕ ಕಾರ್ಯಕರ್ತ ವಿನಯ್ ಕುಮಾರ್ ಮಾಳಗೆ ಆಗ್ರಹಿಸಿದ್ದಾರೆ.

2016ರಲ್ಲಿ ಐಐಟಿ ಹೈದರಾಬಾದ್ ಹಾಗೂ ಕಳೆದ ವರ್ಷ ಐಐಟಿ ಮುಂಬೈನ ತಜ್ಞರ ತಂಡಗಳು ಕರೇಜ್ ವ್ಯವಸ್ಥೆಯ ಕುರಿತು ವೈಜ್ಞಾನಿಕ ಅಧ್ಯಯನ ನಡೆಸಿ ಸಂರಕ್ಷಣೆಗಾಗಿ ವರದಿ ಸಲ್ಲಿಸಿವೆ. ಆ ವರದಿಗಳನ್ನು ಆಧಾರವಾಗಿಸಿಕೊಂಡು ಕರೇಜ್ ಹಾಗೂ ಅದರ ಸುತ್ತಮುತ್ತಲಿನ ಬಫರ್ ವಲಯಗಳ ರಕ್ಷಣೆಗೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. 'ಕರೇಜ್ ಹಾದು ಹೋಗಿರುವ ಕಡೆಗಳಲೆಲ್ಲಾ ಬೇಕಾಬಿಟ್ಟಿ ಕೆಲಸ ನಡೆಯುತ್ತಿದೆ. ತಕ್ಷಣ ತಡೆಯದಿದ್ದರೆ ಅದಕ್ಕೆ ಆಪತ್ತು ಬರುತ್ತದೆ' ಎಂದು ಸ್ಥಳೀಯ ನಿವಾಸಿ ಪಿ. ವಿಜಯಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರನ್ನು ಸಂಪರ್ಕಿಸಿದಾಗ ಅವರು ಮಾಹಿತಿಗೆ ಲಭ್ಯರಾಗಲಿಲ್ಲ.

# ಕಲಾವಿದರ ಸೀಮೋಲ್ಲಂಘನೆಯಿಂದ ಸಂವಿಧಾನ ಪ್ರಜ್ಞೆಗೆ ಶಕ್ತಿ

## ರಂಗಸಂಗಮ ಪ್ರಶಸ್ತಿ ಪ್ರದಾನ: ಡಾ.ರಹಮತ್ ತರೀಕೆರೆ ಹೇಳಿಕೆ




**ಕಲಬುರಗಿ, ಜು.19–:** ಕಲಾವಿದರು ಜಾತಿ, ಮತ, ಪಂಥ, ಭಾಷೆಗಳನ್ನು ಮೀರಿ ಸೀಮೋಲ್ಲಂಘನೆ ಮಾಡಿದರೆ ಅದರಿಂದ ಸಂವಿಧಾನ ಪ್ರಜ್ಞೆಗೆ ಶಕ್ತಿ ತುಂಬುತ್ತದೆ ಎಂದು ಹಿರಿಯ ಸಾಹಿತಿ ಹಾಗೂ ಚಿಂತಕರಾದ ಡಾ. ರಹಮತ್ ತರೀಕೆರೆ ಹೇಳಿದರು. ಕಲಬುರಗಿಯಲ್ಲಿ ಭಾನುವಾರ (ಜುಲೈ 19ರಂದು) ವಿಶ್ವೇಶ್ವರಯ್ಯ ಭವನದಲ್ಲಿ ನಡೆದ ರಂಗಸಂಗಮ ಕಲಾ ವೇದಿಕೆ ಶ್ರೀ ಎಸ್ ಬಿ ಜಂಗಮಶೆಟ್ಟಿ ಹಾಗೂ ಶ್ರೀಮತಿ ಸುಭದ್ರಾ ದೇವಿ ಜಂಗಮಶೆಟ್ಟಿ ರಂಗ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ ಸಿನಿಮಾ, ರಂಗಭೂಮಿ, ಸಂಗೀತ ಕ್ಷೇತ್ರದ ಕಲಾವಿದರು ಗೆರೆಯನ್ನು ದಾಟಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೂಲಕ ಮನುಷ್ಯ ಬಂಧುತ್ವವನ್ನು ರೂಪಿಸುತ್ತಾರೆ.

ಕಲಾಲೋಕ ಸೀಮೋಲ್ಲಂಘನದಿಂದ ಸಂವೇದನಾಶೀಲತೆ ಸೃಷ್ಟಿಯಾಗಿ ಮನೋರಂಜನೆಗಿಂತಲೂ ಮುಖ್ಯವಾಗಿ ಸಾಂಪ್ರದಾಯಿಕತೆಯನ್ನು ಬಿಟ್ಟು ಸಂಸ್ಕೃತಿ ಕಟ್ಟುವ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೇವಲ ಹೋರಾಟ ಗಾರರು ಮಾತ್ರ ಮುಖ್ಯರಾಗುವುದಿಲ್ಲ.ಕಲಾವಿದರಿಗೂ ಅಂತಹ ಕೀರ್ತಿ ಸಲ್ಲುತ್ತದೆ. ನಾಟಕ, ಸಿನಿಮಾ, ರಂಗಭೂಮಿ ಸಂಗೀತ ಕಲಾವಿದರು ಗೆರೆ ಮೀರಿ ಬೆಳೆದ ಪರಿಣಾಮವಾಗಿ ಅಮೀರ ಬಾಯಿ, ರಾಜೀವ್ ತಾರಾನಾಥ್, ಅಲಿ ಅಕ್ರಮ ಖಾನ್ ಮುಂತಾದವರು ಮುಖ್ಯರಾಗುತ್ತಾರೆ ಹಿಂದುಸ್ತಾನಿ ಸಂಗೀತದ ಹಿಂದೆ ಸೂಫಿಸಂ ಪ್ರಭಾವ ಎದ್ದು ಕಾಣುತ್ತದೆ. ಕಲಾವಿದರು ಜಾತ್ಯಾತೀತ, ಧರ್ಮಾತೀತ ಭಾಷಾತೀತ, ಪರಂಪರೆಯನ್ನು ಹುಟ್ಟುಹಾಕಿ ಹೊಸ ಸಮಾಜ ಸೃಷ್ಟಿಗೆ ಕಾರಣೀಭೂತರಾಗುತ್ತಿದ್ದಾರೆ.

**ದೈಹಿಕ ರೋಗಕ್ಕೆ ಔಷಧಿಗಳಿದ್ದರೂ ಮನಸ್ಸಿನ ರೋಗಕ್ಕೆ ಕಲೆ ದಿವ್ಯ ಔಷಧಿಯಾಗಿದ್ದು ಇಂತಹ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದಕ್ಕೆ ಸಂತೋಷವಾಗಿದೆ. ಉತ್ತರ ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಹೊರರಾಜ್ಯಗಳಲ್ಲಿ ರಂಗ ಸೇವೆ ಮಾಡಿದರು. ಈಗ ಕಲ್ಯಾಣ ಕರ್ನಾಟಕದಲ್ಲಿ ಪ್ರಶಸ್ತಿ ಸ್ವೀಕರಿಸುತ್ತಿರುವುದು ಹೆಮ್ಮೆಯ ಸಂಗತಿ.**

ಧ್ರುವವಿಕೃತ ಸಮಾಜ ಸೃಷ್ಟಿಯಾಗುವ ಆತಂಕದ ಸಂದರ್ಭದಲ್ಲಿ ಒಳಗೊಳ್ಳುವಿಕೆಯ ಸಮಾಜ ಸೃಷ್ಟಿಗೆ ಕಲಾವಿದರ ಸೀಮೋಲ್ಲಂಘನೆ ಪ್ರೇರಣೆ ನೀಡುತ್ತದೆ. ಎಸ್ ಜಾನಕಿ ತೆಲುಗಿನವರಾದರರೂ ನಮ್ಮ ಕನ್ನಡದವರಾಗಿ ಬೆರೆತು ಹೋಗಿದ್ದಾರೆ. ಪ್ರಚಾರದ ಸೋಗಿನ ಸಂಗೀತ, ಸಿನಿಮಾ, ರಂಗಭೂಮಿಯ ಆತಂಕದ ನಡುವೆ ಮನೋರಂಜನೆಯಲ್ಲಿ ಸಂಸ್ಕೃತಿಯ ಆತ್ಮ ಕಾಪಾಡುವ ಕೆಲಸ ಕಲೆ ಮಾಡುತ್ತಿದೆ. ಅಂತಹ ಸಾಧನೆ ಮಾಡಿದ ಕ್ಷೇತ್ರದ ಇಬ್ಬರನ್ನು ಪ್ರಶಸ್ತಿ ನೀಡಿ ಗೌರವಿಸಿರುವುದು ಶ್ಲಾಘನೀಯ ಎಂದು ತರೀಕೆರೆ ಹೇಳಿದರು.

ರಂಗ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಕಲಾವಿದರಾದ ರಾಚಯ್ಯ ಸ್ವಾಮಿ, ಕೊಪ್ಪಳ ಹಾಗೂ ಹುಬ್ಬಳ್ಳಿಯ ವೀಣಾ ಶರ್ಮ ಭೂಸನೂರ ಮಠ ಅವರಿಗೆ ತಲಾ ಹತ್ತು ಸಾವಿರ ನಗದು ಪುರಸ್ಕಾರ, ಸ್ಮರಣಿಕೆ ,ಪೇಟ ಹಾಗೂ ಶಾಲು ನೀಡಿ 2026 ನೇ ಸಾಲಿನ ಎಸ್ ಬಿ ಜಂಗಮಶೆಟ್ಟಿ ಮತ್ತು ಸುಭದ್ರಾ ದೇವಿ ಜಂಗಮಶೆಟ್ಟಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಮಾಹಿತಿ ಆಯುಕ್ತ ರಾಜಶೇಖರ ಎಸ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಬಸವರಾಜ ಹೂಗಾರ್ ಗದಗದ ನಿವೃತ್ತ ಉಪನ್ಯಾಸಕಿ ಭಾರತಿ ಮೋಹನ ಕೋಟಿ, ಕಲಬುರಗಿ ರಂಗಾಯಣದ ನಿರ್ದೇಶಕಿ ಡಾ ಸುಜಾತಾ ಜಂಗಮಶೆಟ್ಟಿ, ಮಾತನಾಡಿದರು. ರಂಗಸಂಗಮ ಕಲಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಶಿವಗೀತಾ ಬಸವಪ್ರಭು ಉಪಸ್ಥಿತರಿದ್ದರು. ಹಿರಿಯ ಸಾಹಿತಿ ಆರ್. ಕೆ. ಹುಡಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾದ ಬಿ ಎಚ್ ನಿರಗುಡಿ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪನ್ಯಾಸಕ ಕಪಿಲ್ ಚಕ್ರವರ್ತಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು ಸಿದ್ಧಾರ್ಥ ಚಿಮ್ಮಾ ಇದ್ಲಾಯಿ ಮತ್ತು ಸಂಗಡಿಗರು ರಂಗಗೀತೆಗಳನ್ನು ಹಾಡಿದರು.

### ವೀಣಾ ಶರ್ಮಾ ಭೂಸನೂರಮಠ, ಪ್ರಶಸ್ತಿ ಪುರಸ್ಕೃತ ರಂಗ ಕಲಾವಿದೆ:

**ಕಲ್ಯಾಣ ಕರ್ನಾಟಕದ ಕಲಾವಿದರ ಕಡೆಗಣನೆಗೆ ಮನನೊಂದು 15 ವರ್ಷಗಳ ಹಿಂದೆ ರಂಗಸಂಗಮ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ರಾಜ್ಯಮಟ್ಟದ ಪ್ರಶಸ್ತಿ ಪಡೆದ ಎಲೆಮರೆಯ ರಂಗ ಕಲಾವಿದರನ್ನು ಗುರುತಿಸಿ ಅರ್ಹರಿಗೆ ಈ ಪ್ರಶಸ್ತಿಯನ್ನು ತಂದೆ ತಾಯಿಯವರ ಹೆಸರಿನಲ್ಲಿ ನೀಡಲಾಗುತ್ತಿದೆ. ಡಾ. ಸುಜಾತ ಜಂಗಮಶೆಟ್ಟಿ, ನಿರ್ದೇಶಕರು ರಂಗಾಯಣ ಕಲಬುರಗಿ**

**ಪ್ರಶಸ್ತಿ ತೆಗೆದುಕೊಳ್ಳುವುದು ಮತ್ತು ಕೊಡುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿದೆ ಕರ್ನಾಟಕ ಸರ್ಕಾರ ಹತ್ತಾರು ಕೋಟಿ ವೆಚ್ಚ ಮಾಡಿ ಪ್ರಶಸ್ತಿ ನೀಡುತ್ತಿದ್ದರು ಇಂತಹ ಸಂಘ ಸಂಸ್ಥೆಗಳ ಪ್ರಶಸ್ತಿ ಮಹತ್ವದ್ದಾಗಿದ್ದು ಕಲಾವಿದರಿಗೆ ಇನ್ನಷ್ಟು ಗೌರವ ತಂದು ಕೊಡುತ್ತಿದೆ. ಬಸವರಾಜ ಹೂಗಾರ, ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ,ಕಲಬುರಗಿ**

# ಅಲೆಮಾರಿಗಳಿಗೆ ವಾಸಸ್ಥಳ ಕಲ್ಪಿಸಲು ಸರ್ಕಾರಕ್ಕೆ ಆಗ್ರಹ



**ಬೀದರ್, ಜು. 19:** ನಗರದ ನೌಬಾದ್‌ನ ಚೌಳಿ ಕಮಾನ್ ಸಮೀಪ ಕಳೆದ ಎರಡು ದಶಕಗಳಿಂದ ತಾತ್ಕಾಲಿಕ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವ ಅಲೆಮಾರಿ ಸಮುದಾಯದ ಜನರಿಗೆ ತಾಲ್ಲೂಕಿನ ಬಾಗೆ ಕಾರಂಜಾ (ಬೆಚಿರಾಕ್) ಗ್ರಾಮದ ಸರ್ವೇ ನಂ.45ರ ಸರ್ಕಾರಿ ಜಮೀನಿನಲ್ಲಿ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡು ವಾಸಿಸಲು ಅವಕಾಶ ಕಲ್ಪಿಸಬೇಕು ಎಂದು ಅಲೆಮಾರಿ ಸಮುದಾಯದವರು ಆಗ್ರಹಿಸಿದರು.

ವಿಶ್ವ ಕ್ರಾಂತಿ ದಿವ್ಯ ಪೀಠದ ಅಧ್ಯಕ್ಷ ಓಂಪ್ರಕಾಶ್ ರೊಟ್ಟೆ ಅವರ ನೇತೃತ್ವದಲ್ಲಿ ನಗರದ ಜಿಲ್ಲಾ ಪಂಚಾಯಿತಿ ಎದುರು ಶನಿವಾರ ಧರಣಿ ನಡೆಸಿದ ನಂತರ ಸಂಸದ ಸಾಗರ್ ಖಂಡ್ರೆ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ಅಲೆಮಾರಿ ಸಮುದಾಯದವರು ಕಳೆದ 20–25 ವರ್ಷಗಳಿಂದ ಚೌಳಿ ಕಮಾನ್ ಸಮೀಪ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಶುದ್ಧ ಕುಡಿಯುವ ನೀರು, ವಿದ್ಯುತ್, ಶೌಚಾಲಯ ಸೇರಿದಂತೆ ಯಾವುದೇ ಮೂಲಸೌಲಭ್ಯಗಳಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಮಹಿಳೆಯರು ಹಾಗೂ ಮಕ್ಕಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ಸುತ್ತಮುತ್ತಲಿನ ಕೆಲವರಿಂದ ನಿರಂತರ ಕಿರುಕುಳವೂ ಎದುರಿಸುತ್ತಿದ್ದಾರೆ ಎಂದು ಗೋಳು ತೋಡಿಕೊಂಡರು.

ಸಂಸದ ಸಾಗರ್ ಖಂಡ್ರೆ ಪ್ರತಿಕ್ರಿಯಿಸಿ, ಜಿಲ್ಲಾಧಿಕಾರಿ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ ಅವರು, ಅಲೆಮಾರಿ ಸಮುದಾಯದವರಿಗೆ ರಾತ್ರಿ ವೇಳೆ ಪೊಲೀಸ್ ಭದ್ರತೆ ಒದಗಿಸುವಂತೆ ಸ್ಥಳದಲ್ಲಿದ್ದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಅವರಿಗೆ ಸೂಚಿಸಿದರು.

ತಾತ್ಕಾಲಿಕವಾಗಿ ಗುಡಿಸಲು ಹಾಕಿಕೊಂಡು ವಾಸಿಸಲು ಅನುಮತಿ ದೊರೆಯುವವರೆಗೆ ಜು.20 ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ಓಂಪ್ರಕಾಶ್ ರೊಟ್ಟೆ ಎಚ್ಚರಿಕೆ ನೀಡಿದ್ದಾರೆ.

# ಕೋಲಾರ ಜಿಲ್ಲೆಯನ್ನು ರಾಜ್ಯದ ಮೊದಲ ಕಾರ್ಬನ್ ಜಿಲ್ಲೆಯನ್ನಾಗಿ ಮಾಡಲು ಸರ್ಕಾರ ಸಿದ್ಧತೆ: ಮುಖ್ಯಮಂತ್ರಿ ಸಲಹೆಗಾರ ಉಪೇಂದ್ರ ತ್ರಿಪಾಠಿ

**ಕೋಲಾರ, ಜು.19:** ಕೋಲಾರ ಜಿಲ್ಲೆಯನ್ನು ರಾ2ಜ್ಯದ ಪ್ರಥಮ 'ಕಾರ್ಬನ್ ಜಿಲ್ಲೆ ಯನ್ನಾಗಿ ರೂಪಿಸುವ ಬೃಹತ್ ಯೋಜನೆಯೊಂದು ಸಿದ್ಧಗೊಳ್ಳುತ್ತಿದ್ದು, ಕೃಷಿ ಅರಣ್ಯ ಬೆಳೆಸುವ ರೈತರಿಗೆ 'ಕಾರ್ಬನ್ ಕ್ರೆಡಿಟ್ ಮಾರಿ ಜಾಗತಿಕ ಮಾರುಕಟ್ಟೆಯಿಂದ ಹೆಚ್ಚುವರಿ ಆದಾಯ ತಂದುಕೊಡುವುದು ನಮ್ಮ ಪ್ರಮುಖ ಗುರಿಯಾಗಿದೆ' ಎಂದು ಮುಖ್ಯಮಂತ್ರಿಯವರ ಸಲಹೆಗಾರರು ಉಪೇಂದ್ರ ತ್ರಿಪಾಠಿ, ಈ ಯೋಜನೆಯನ್ನು ಕೇವಲ ಸರ್ಕಾರಿ ಕಾರ್ಯಕ್ರಮ ವನ್ನಾಗಿಸದೆ ರೈತರ ಪಾಲ್ಗೊಳ್ಳುವಿಕ 'ಯೊಂದಿಗೆ ಯಶಸ್ವಿಗೊಳಿಸಲು ಒತ್ತು ನೀಡಬೇಕೆಂದು ಸೂಚಿಸಿದರು.

ಜಿಲ್ಲೆಯಾದ್ಯಂತ ಕನಿಷ್ಠ 10,000 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಅರಣ್ಯವನ್ನು ಅಭಿವೃದ್ಧಿಪಡಿಸುವ ಲಾಭದಾಯಕ ಆರ್ಥಿಕ ಮಾದರಿಯನ್ನು ಸಿದ್ಧಪಡಿಸಬೇಕಿದೆ. ಕೇವಲ ಮಾವು ಬೆಳೆಯುವುದಷ್ಟೇ ಅಲ್ಲದೆ ತೇಗ, ಮಹಾಗನಿ, ಸಿಲ್ವರ್ ಓಕ್, ಬೇವು, ಹೊಂಗೆ ಮತ್ತು ಹಲಸು ಮುಂತಾದ ಮರಗಳನ್ನು ಬೆಳೆಸುವ ಮೂಲಕ ರೈತರು ಹೆಚ್ಚಿನ ಪ್ರಮಾಣದಲ್ಲಿ ಕಾರ್ಬನ್ ಕ್ರೆಡಿಟ್ ಪಡೆಯಲು ಅವರನ್ನು ಉತ್ತೇಜಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.



ಇದರಿಂದ ಮಹಿಳೆಯರು, ರೈತರು ಹಾಗೂ ಸಾರ್ವಜನಿಕರಿಗೆ ಪ್ರಯೋಜನವಾಗಲಿದೆ. ಜೊತೆಗೆ ಜಿಲ್ಲೆಯಲ್ಲಿ ಬಂಡವಾಳ ಹೂಡಿಕೆ, ಉದ್ಯೋಗಾವಕಾಶ ಹಾಗೂ ಪರಿಸರಮಟ್ಟ ಸುಧಾರಣೆಯಾಗಲು ಅನುವುಂಟಾಗಲಿದೆ ಎಂದರು.ರೈತರು ತಾವು ಬೆಳೆಸಿದ ಮರಗಳ ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ ಕಾರ್ಬನ್ ಕ್ರೆಡಿಟ್ ಮಾರಾಟ ಮಾಡಿ ಆರ್ಥಿಕ ಲಾಭ ಪಡೆಯಲಿದ್ದು, ಪ್ರತಿ ಕಾರ್ಬನ್ ಕ್ರೆಡಿಟ್‌ಗೆ ಕನಿಷ್ಠ 15 ರಿಂದ 20 ಯುರೋಗಳಷ್ಟು (ಅಂದಾಜು 1500 ರಿಂದ 2000 ರೂ.) ಬೆಲೆ ಸಿಗುವ ನಿರೀಕ್ಷೆಯಿದೆ ಎಂದು ಸಭೆಯಲ್ಲಿ ವಿವರಿಸಲಾಯಿತು. ಕೇವಲ ಮರ ಬೆಳೆಸುವುದಷ್ಟೇ ಅಲ್ಲದೆ, ಹೈನುಗಾರಿಕೆ, ಡೈರಿ ಸೆಕ್ಟರ್, ಬಯೋಗ್ಯಾಸ್ ಹಾಗೂ ಸೌರಶಕ್ತಿ ಬಳಕೆಯಂತಹ ಸ್ವಯಂಪ್ರೇರಿತ ವಲಯಗಳಲ್ಲೂ ಕಾರ್ಬನ್ ಕ್ರೆಡಿಟ್ ಪಡೆಯುವ ಸಾಧ್ಯತೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸಲಾಯಿತು. ಇದಲ್ಲದೆ, ಕಾರ್ಬನ್ ಕ್ರೆಡಿಟ್ ಲೆಕ್ಕಾಚಾರ ಮತ್ತು ಪರಿಶೀಲನೆ ಗಾಗಿ ಅಂತರರಾಷ್ಟ್ರೀಯ ಮಟ್ಟದ ಪ್ರಮಾಣೀಕರಣ ಸಂಸ್ಥೆಗಳನ್ನು ಜಿಲ್ಲೆಗೆ ಆಹ್ವಾನಿಸುವ ಕುರಿತು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಹಾಗೂ ಮುಂದಿನ ರೂಪುರೇಷೆಗಳನ್ನು ಸಿದ್ಧಪಡಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕೃಷಿ, ತೋಟಗಾರಿಕೆ ಹವಾಮಾನ ಸಂಬಂಧಿತ ವಿಭಾಗಗಳ ಸಂಬಂಧಿತ ಅರಿತ ವ್ಯಕ್ತಿಗಳನ್ನೊಳಗೊಂಡ ಪ್ರಮುಖ ಸಮಿತಿಯೊಂದನ್ನು ರಚಿಸಲು ಸಭೆ ನಿರ್ಧರಿಸಲಾಯಿತು.

## ಸರ್ಕಾರದ ಆಶಯಕ್ಕೆ ತಕ್ಕುದಾಗಿ ಕೆಲಸ ನಿರ್ವಹಿಸಿ

# ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ ಸಚಿವರ ನಿರ್ದೇಶನ ಪಾಲಿಸಲು ಅಧಿಕಾರಿಗಳಿಗೆ ವಿಜಯಪುರ ಜಿಲ್ಲಾಧಿಕಾರಿ ಸೂಚನೆ

**ವಿಜಯಪುರ, ಜು.19**: ತಾಲೂಕಾ ಕಚೇರಿಗಳಿಂದ ಹೋಬಳಿ ಮಟ್ಟಕ್ಕೆ ಸರ್ಕಾರದ ಪ್ರತಿಯೊಂದೂ ಯೋಜನೆ ತಲುಪಬೇಕು. ಜನರಿಗಾಗಿ ಈ ಸರ್ಕಾರವಿದೆ. ಹಾಗಾಗಿ ಅಧಿಕಾರಿಗಳು ಸರಕಾರದ ಆಶಯಕ್ಕೆ ತಕ್ಕುದಾಗಿ ಕೆಲಸ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಭಾನುವಾರಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಜೊತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ನಡೆದ ವಿಡಿಯೋ ಸಂವಾದ ಸಭೆಯ ಬಳಿಕ ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.ಸ್ಥಳೀಯ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕುಡಿಯುವ ನೀರಿನ ಬಗ್ಗೆ ಕ್ರಮ ವಹಿಸಬೇಕು. ಮಾನ್ಯ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಹಾಗೂ ಸಚಿವರು ನೀಡಿದ ಸಲಹೆ ಸೂಚನೆಗಳನ್ವಯ ಕಡ್ಡಾಯವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಮಳೆ ಅಭಾವದಿಂದಾಗಿ ಜನತೆಯ ಹಿತದೃಷ್ಟಿಯಿಂದ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಮತ್ತು ಉದ್ಯೋಗ ಖಾತ್ರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ತೀವ್ರ ನಿಗಾ ವಹಿಸಬೇಕು. ಸಮಸ್ಯೆ ಇರುವ ಕಡೆಗಳಲ್ಲಿ ತಕ್ಷಣವೇ ಪರ್ಯಾಯ ವ್ಯವಸ್ಥೆಗಳನ್ನು



ಕಲ್ಪಿಸಬೇಕು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕ ವಿಳಂಬವಿಲ್ಲದೆ ತಕ್ಷಣವೇ ಜನರ ಸಮಸ್ಯೆಗೆ ಸ್ಪಂದಿಸಬೇಕು.

ಇದರೊಂದಿಗೆ ಜಿಲ್ಲೆಯಲ್ಲಿ ಮೇವಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮೇವು ಬೆಳೆ ಅಭಿವೃದ್ಧಿಗೆ ಲಭ್ಯವಿರುವ ಎಲ್ಲ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದರು. ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಆಹಾರ ಕಿಟ್ ಸಾಕಷ್ಟು ದಾಸ್ತಾನು ಹೊಂದಿರಬೇಕು ಎಂದರು. ಜಿಲ್ಲೆಯು ಅಂತರ ರಾಜ್ಯ ಗಡಿಹೊಂದಿದ್ದು ಜಿಲ್ಲೆಯಿಂದ ಅನ್ಯ ರಾಜ್ಯಕ್ಕೆ ಮೇವಿನ ರವಾನೆಯಾಗದಂತೆ ಕಟ್ಟೆಚ್ಚರ ವಹಿಸಬೇಕು. ಮೇವು ಬೆಳೆ ಅಭಿವೃದ್ಧಿ ಪಡಿಸಲು ಹೋಬಳಿಗಳಲ್ಲಿ ವಿಬಿಜಿ ರಾಮ್ ಜಿ ಯೋಜನೆಯಡಿ ಮೇವಿನ ಕೊರತೆ ನೀಗಿಸಲು ಕ್ರಮವಹಿಸಿ. ಮೇವು ಸಂಗ್ರಹದ ನಿಖರ ಮಾಹಿತಿ ಹೊಂದಿರಬೇಕು ಎಂದರು.

ಗ್ರಾಮೀಣ ಭಾಗದ ಜನರು ಉದ್ಯೋಗ ಅರಸಿ ಬೇರೆ ಕಡೆಗೆ ಗುಳೆ ಹೋಗದಂತೆ ತಡೆಯಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಬಿಜಿ ರಾಜ್ ಜಿ ಯೋಜನೆ ಕುರಿತ ವ್ಯಾಪಕ ಪ್ರಚಾರ ಕೈಗೊಂಡು ಸ್ಥಳೀಯವಾಗಿ ಉದ್ಯೋಗಗಳನ್ನು ಸೃಷ್ಟಿಸಬೇಕು. ವೈಯಕ್ತಿಕ ಕಾಮಗಾರಿ ಹಾಗೂ ಸಮುದಾಯ ಆಧಾರಿತ ಅಭಿವೃದ್ಧಿ ಒಳಗೊಂಡಂತೆ ಒಟ್ಟು 318 ಕಾಮಗಾರಿಗಳನ್ನು ತೆಗೆದುಕೊಳ್ಳಲು ಮುಕ್ತ ಅವಕಾಶವಿದ್ದು, ಇವುಗಳನ್ನು ತಕ್ಷಣವೇ ಆರಂಭಿಸಿ ಹೆಚ್ಚು ಮಾನವ ದಿನಗಳ ಸೃಜನೆ ಮಾಡಿ, ಸಾರ್ವಜನಿಕರು ಮತ್ತು ರೈತರ ಸಮಸ್ಯೆಗೆ ಅಧಿಕಾರಿಗಳು ತಕ್ಷಣವೇ ಸ್ಪಂದಿಸಿ ಎಂದು ಸಿಎಂ ಹಾಗೂ ಡಿಸಿಎಂ ಅವರು ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಯೋಜನೆಗಳನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ತಲುಪಿಸಬೇಕು.

ವಿಬಿ ಜಿ ರಾಮ ಜಿ ಯೋಜನೆಯಡಿ ವಿವಿಧ ನಿರ್ವಹಣಾ ಕಾಮಗಾರಿ ತೆಗೆದುಕೊಳ್ಳಬಹುದು. ಅಂಗನವಾಡಿ ಹಾಗೂ ಶಾಲಾ ದುರಸ್ತಿಗೆ ವಿಬಿಜಿ ರಾಮ್ ಜಿ ಯೋಜನೆಯಡಿ ತೆಗೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಸೂಚಿಸಿದರು. ಕಡ್ಲೇವಾಡ ಹಾಗೂ ಜಂಬಗಿ ಸೇರಿದಂತೆ ವಿವಿಧ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಕೆರೆಗಳನ್ನು ಭರ್ತಿ ಮಾಡಿಟ್ಟುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಮುಳವಾಡ ಏತನೀರಾವರಿ ಕಾಲುವೆ ಮೇಲಿನ 23 ಕೆರೆಗಳನ್ನು ಮುಖ್ಯವಾಗಿ ಹಂಜಗಿ ಕೆರೆ ತುಂಬಿಸಲು ಕ್ರಮವಹಿಸಿ. ಮುಂದಿನ ಹತ್ತು ದಿನಗಳಲ್ಲಿ ನೀರು ತುಂಬಿಸಬೇಕು ಜಿಲ್ಲಾಧಿಕಾರಿ ಗಳು, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿ ಹಾಗೂ ಸಚಿವರು ಹಿರಿಯ ಅಧಿಕಾರಿಗಳು ಇಂದಿನ ವಿಡಿಯೋ ಸಂವಾದ ಸಭೆಯಲ್ಲಿ ನೀಡಿದ ಸೂಚನೆಗಳನ್ನು ಎಲ್ಲ ಅಧಿಕಾರಿಗಳು ಕಟ್ಟುನಿಟ್ಟಾಗಿ ನಿರ್ವಹಿಸಬೇಕು ಎಂದರು.

# ಮುಂದಿನ 2-3 ದಿನಗಳವರೆಗೆ ಕರಾವಳಿ ಪ್ರದೇಶಗಳಲ್ಲಿ ಮಳೆ ತೀವ್ರಗೊಳ್ಳುವ ಸಾಧ್ಯತೆ: ಯೆಲ್ಲೋ ಅಲರ್ಟ್

**ದಕ್ಷಿಣ ಕನ್ನಡ, ಜು.19–** ಕಳೆದ 2–3 ದಿನಗಳಿಂದ ಕರಾವಳಿಯಲ್ಲಿ ಮತ್ತೆ ಮಳೆ ಚುರುಕಾಗಿದೆ. ಭಾನುವಾರ ಸಂಜೆ ಅಂದರೆ ಮುಂದಿನ ಮೂರು ಗಂಟೆಯಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಸೋಮವಾರವೂ ಭಾರಿ ಮಳೆಯ ಹಿನ್ನೆಲೆ ಯೆಲ್ಲೋಅಲರ್ಟ್ ಕೊಡಲಾಗಿದೆ. ಕರಾವಳಿ ಅಷ್ಟೇ ಅಲ್ಲದೆ ಮಲೆನಾಡು ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೂ ಭರ್ಜರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ. ಜುಲೈ 20 ಸೋಮವಾರದಂದು, ದಕ್ಷಿಣ ಕನ್ನಡ ಉಡುಪಿ, ಉತ್ತರ ಕನ್ನಡ, ಬೀದರ್, ಗದಗ, ಕಲಬುರ್ಗಿ, ಕೊಪ್ಪಳ, ರಾಯಚೂರು, ವಿಜಯಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಶಿವಮೊಗ್ಗ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮಳೆಯ ಜೊತೆಗೆ ದಟ್ಟಗಾಳಿಯ ಮುನ್ಸೂಚನೆ ಕೊಡಲಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಜುಲೈ 21 ರಿಂದ 23 ರವರೆಗೆ ದಟ್ಟ



ಗಾಳಿಯ ಮುನ್ಸೂಚನೆ ಇದ್ದು, 40–50 ಕಿಮೀ ವೇಗದಲ್ಲಿ ಬೀಸುವ ಮುನ್ಸೂಚನೆ ಇದೆ. 23 ರವರೆಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಿಗೇಊ ಬಿರುಗಾಳಿಯ ಮುನ್ಸೂಚನೆ ಇದೆ. ಜುಲೈ 21 ರಿಂದ ಮಳೆ ಕ್ಷೀಣ 17 ರಿಂದ ಕರಾವಳಿಯಲ್ಲಿ ಭಾರಿ ಮಳೆಯಾಗಿತ್ತು. ಆದರೆ ನಾಲ್ಕೇ ದಿನಕ್ಕೆ ಸೀಮಿತವಾದ ಮಳೆ 21 ರಿಂದ ಮತ್ತೆ ಮರೀಚಿಕೆ ಆಗಲಿದೆ. ಅಲ್ಲಲ್ಲಿ ಹಗುರದಿಂದ ಸಾಧಾರಣ ಮಳೆ ಮಾತ್ರ ಆಗಲಿದೆ.

ಬೆಂಗಳೂರಲ್ಲಿಯೂ ಹಗುರದಿಂದ ಸಾಧಾರಣ ಮಳೆ, ಗಾಳಿಯ ಮುನ್ಸೂಚನೆ ಇದೆ. ಮೋಡ ಕವಿದ ವಾತಾವರಣ ಇರಲಿದ್ದು,ತಾಪಮಾನ 21 ಡಿಗ್ರಿ ಸೆ, ನಿಂದ 29 ಡಿಗ್ರಿ ಸೆ. ತಾಪಮಾನ ಇರಲಿದೆ.

ರಾಜ್ಯದಲ್ಲಿ ಶನಿವಾರದವರೆಗೂ ವಾಡಿಕೆ ಮಳೆಯ ಶೇ 39 ರಷ್ಟು ಕೊರತೆ ದಾಖಲಾಗಿದೆ. ಮಲೆನಾಡಿನಲ್ಲಿ ಅತ್ಯಧಿಕ –43%, ಕರಾವಳಿಯಲ್ಲಿ –35%, ಉತ್ತರ ಒಳನಾಡಿನಲ್ಲಿ –33% ಮತ್ತು ದಕ್ಷಿಣ ಒಳನಾಡಿನಲ್ಲಿ –31% ರಷ್ಟು ಮಳೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದು ನೇರವಾಗಿ ಜಲಾಶಯಗಳ ನೀರಿನ ಸಂಗ್ರಹದಲ್ಲಿ ಕೊರತೆಯಾಗಿದೆ. ಜಲಾಶಯಗಳಲ್ಲಿ ಶೇ 40% ರಷ್ಟು ಮಾತ್ರ ನೀರು ತುಂಬಿದೆ.

# ಅಯೋಧ್ಯೆ ರಾಮಮಂದಿರದ ಹುಂಡಿ ಹಣದ ಕಳ್ಳತನ: ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಬಳ್ಳಾರಿಯಲ್ಲಿ ಪಂಜಿನ ಮೆರವಣಿಗೆ



**ಬಳ್ಳಾರಿ, ಜು.19:** ಅಯೋಧ್ಯೆ ರಾಮ ಮಂದಿರದ ಹುಂಡಿ ಹಣದ ಕಳ್ಳತನ ಮತ್ತು ದುರುಪಯೋಗವನ್ನು ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ. ಶನಿವಾರ ಸಂಜೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿರುವ ಮಹಾತ್ಮ ಗಾಂಧೀಜಿ ಪ್ರತಿಮೆಯಿಂದ ಗಡಗಿ ಚೆನ್ನಪ್ಪ ಸರ್ಕಲ್ ವರೆಗೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿದರು.

ಬಳ್ಳಾರಿ ಗ್ರಾಮಾಂತರ ಮತ್ತು ನಗರ ಜಿಲ್ಲಾ ಕಾಂಗ್ರೆಸ್ ಇದನ್ನು ಆಯೋಜಿಸಿತ್ತು.ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಬುಡಾ ಅಧ್ಯಕ್ಷ ಜೆ. ಎಸ್.ಆಂಜನೇಯಲು, ಪಕ್ಷದ ಪ್ರಚಾರ ಸಮಿತಿಯ ಗ್ರಾಮೀಣ ಜಿಲ್ಲಾ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ನಗರ ಜಿಲ್ಲಾ ಅಧ್ಯಕ್ಷ ಈರನಗೌಡ ಮೊದಲಾದವರು ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಮುಖಂಡರು. ರಾಮನ ಹೆಸರೇಳಿ ಕೊಂಡ ಜಪಿಸುವವರೇ ರಾಮನ ಹುಂಡಿಯ ಹಣ ಕದ್ದಿದ್ದಾರೆ ಎಂದರೆ ಇವರ ಭಕ್ತಿ ಎಂತಹದು. ದೇಶದ ಜನತೆ ರಾಮನಿಗಾಗಿ ಸಲ್ಲಿಸಿದ ಕಾಣಿಕೆಯನ್ನು ಕದ್ದಿರುವ ಇವರಿಗೆ ಏನೆನ್ನಬೇಕು. ಕದ್ದಿರುವ ಕೆಲವರನ್ನು ಮಾತ್ರ ಈಗ ಎಸ್ ಐಟಿ ಮೂಲಕ ಬಂಧಿಸಲಾಗಿದೆ. ಇದರ ಹಿಂದೆ ಇನ್ನೂ ಹಲವರ ಕೈವಾಡ ಇರುವ ಶಂಕೆ ಇದೆ. ಸರಿಯಾದ ತನಿಖೆ ಮಾಡಬೇಕು ಅದಕ್ಕಾಗಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಆಗಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

### ವಾಡಿ ಜಂಕ್ಷನ್ ರೈಲು ನಿಲ್ದಾಣದಲ್ಲಿ

# ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್‌ಗೆ ಅದ್ದೂರಿ ಸ್ವಾಗತ!



**ಕಲಬುರಗಿ, ಜು. 19:** ಜಿಲ್ಲೆಯ ವಾಡಿ ರೈಲ್ವೆಜಂಕ್ಷನ್ ನಿಲ್ದಾಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ನಿಲ್ದಾಣದಲ್ಲೇ ಅಪರ ಸಂಖ್ಯೆಯಲ್ಲಿ ನೆರೆದಿದ್ದ ಸಂಘದ ಹಾಗೂ ಬಿಜೆಪಿ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಶನಿವಾರ ಸಂಜೆ ಉದ್ಯಾನ್ ಎಕ್ಸ್‌ಪ್ರೆಸ್ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ವೇಳೆ ವಾಡಿ ರೈಲು ನಿಲ್ದಾಣದಲ್ಲಿ ಕೆಲಕಾಲ ರೈಲು ನಿಂತಾಗ, ಡಾ.ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಲು ಸಹಸ್ರಾರು ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ರೈಲು ನಿಲ್ದಾಣದಲ್ಲಿ ಜಮಾಯಿಸಿದ್ದರು.

ಈ ವೇಳೆ 'ಭಾರತ ಮಾತೆ ಕೀ ಜೈ", 'ಜೈ ಶ್ರೀರಾಮ್' ಸೇರಿದಂತೆ ವಿವಿಧ ಘೋಷಣೆಗಳಿಂದ ನಿಲ್ದಾಣದಲ್ಲಿ ಮೊಳಗಿದವು. ವಾಡಿ ಜಂಕ್ಷನ್ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ವೀರಣ್ಣ ಯಾರಿ ಅವರು ಚಕ್ರವರ್ತಿ ಸೂಲಿಬೆಲೆ ರಚಿಸಿರುವ ಅಪ್ರತಿಮ ದೇಶಭಕ್ತ ಸ್ವಾತಂತ್ರ್ಯ ವೀರ ಸಾವರ್ಕರ್ ಕೃತಿಯನ್ನು ಡಾ.ಮೋಹನ್ ಭಾಗವತ್ ಅವರಿಗೆ ನೀಡಿ ಗೌರವಿಸಿದರು.

ರೈಲಿನ ದ್ವಾರದಲ್ಲೇ ನಿಂತು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಡಾ.ಮೋಹನ್ ಭಾಗವತ್ ಅವರು, ಸಂಘಟನೆಯೇ ನಿಜವಾದ ಸ್ವಾಭಿಮಾನದ ಸಂಪತ್ತು. ಸಮಾಜದ ಹಿತಕ್ಕಾಗಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಭಾಗವತ್ ಅವರ ಆಗಮನದಿಂದ ವಾಡಿ ರೈಲು ನಿಲ್ದಾಣದಲ್ಲಿ ಕೆಲಕಾಲ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಅವರನ್ನು ಕಣ್ತುಂಬಿಕೊಳ್ಳಲು ಕಾರ್ಯಕರ್ತರು ಮುಗಿಬಿದ್ದರು. ಈ ಸಂದರ್ಭದಲ್ಲಿ ಬಿಜೆಪಿ ಹಾಗೂ ಸಂಘದ ಹಲವಾರು ಮುಖಂಡರು ದೊಡ್ಡ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಪಂಢರಾಪುರಕ್ಕೆ ವಿಶೇಷ ರೈಲಿನ ವ್ಯವಸ್ಥೆ: ಭಗವಂತ ಖೂಬಾ



ಜುಲೈ 25 ರಂದು ಇರುವ ಅಷಾಢ ಏಕಾದಶಿಯ ನಿಮಿತ್ಯ ಕ್ಷೇತ್ರದ ಜನತೆಯ ಅನುಕೂಲಕ್ಕಾಗಿ ಬೀದರ ನಿಂದ ಪಂಢರಾಪುರಕ್ಕೆ (ಅಕೋಲಾ –ಪಂಢರಾಪುರ–ಅಕೋಲಾ) ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿದೆ, ಎಲ್ಲಾ ಸದ್ಭಕ್ತರು ಇದರ ಸದೂಪಯೋಗ ಪಡೆದು ಕೊಳ್ಳಬೇಕೆಂದು ಮಾಜಿ ಕೇಂದ್ರ ಸಚಿವರಾದ ಭಗವಂತ ಖೂಬಾ ತಿಳಿಸಿದ್ದಾರೆ.

ಈ ವಿಶೇಷ ರೈಲು, (ರೈಲು ಸಂಖ್ಯೆ: 07635), ದಿನಾಂಕ: 24–07–2026, ಶುಕ್ರವಾರದಂದು ಮಹಾರಾಷ್ಟ್ರದ ಅಕೋಲಾದಿಂದ ಬೆಳಿಗ್ಗೆ 11.00 ಗಂಟೆಗೆ ಹೊರಟು ಲಾತೂರ ರೋಡ್, ಉದಗಿರ, ಭಾಲ್ಕಿ (ರಾ. 9.17) ಮಾರ್ಗವಾಗಿ ಬೀದರ ನಿಂದ ರಾತ್ರಿ 09.52ಕ್ಕೆ ಹೊರಟು, ಜಹಿರಾಬಾದ, ವಿಕಾರಾಬಾದ, ಚಿತ್ತಾಪೂರ, ಕಲಬುರಗಿ, ಸೊಲಾಪೂರ ಮಾರ್ಗವಾಗಿ ಮರುದಿನ ಏಕಾದಶಿಯ ದಿನ 25–07–2026ರ ಬೆಳಿಗ್ಗೆ 09.20 ಗಂಟೆಗೆ ಪಂಢರಾಪುರಕ್ಕೆ ತಲುಪಲಿದೆ.

ಅದೇ ದಿನ 25–07–2026, ಶನಿವಾರ (ರೈಲು ಸಂಖ್ಯೆ: 07634) ಮಧ್ಯಾಹ್ನ 03.50ಕ್ಕೆ ಪಂಢರಾಪುರ ದಿಂದ ಹೊರಟು ಬಂದ ಮಾರ್ಗವಾಗಿ ಮರುದಿನ 26–07–2024ರ ನಸುಕಿನಜಾವ 03.10ಕ್ಕೆ ಬೀದರ ಮತ್ತು 04.20 ಗಂಟೆಗೆ ಭಾಲ್ಕಿಗೆ ತಲುಪಲಿದೆ, ನಂತರ ಸಾಯಂಕಾಲ 04.50 ಗಂಟೆಗೆ ಅಕೋಲಾ ತಲುಪಲಿದೆ.

ಈ ವಿಶೇಷ ರೈಲು 22 ಬೋಗಿಗಳು ಹೊಂದಿದ್ದು, ಎಲ್ಲಾ ಸದ್ಭಕ್ತರು ಈ ವಿಶೇಷ ರೈಲಿನ ಸದುಪಯೋಗ ಪಡೆದುಕೊಂಡು, ಸಮಾಧಾನ ಮತ್ತು ಸುರಕ್ಷಿತವಾಗಿ ಪಂಢರಾಪುರಕ್ಕೆ ತೆರಳಿ, ಪಂಡರಿನಾಥನ ದರುಶನ ಮಾಡಿಕೊಂಡು ಬರಲು ಮಾಜಿ ಸಚಿವ ಭಗವಂತ ಖೂಬಾ ವಿನಂತಿಸಿ ಕೊಂಡಿದ್ದಾರೆ.

# ದೇಶ ಕಂಡ ಅತ್ಯುತ್ತಮ ಗಾಯಕಿ ಎಸ್. ಜಾನಕಿ: ಮಾರುತಿ ಬಡಿಗೇರ




**ರಾಯಚೂರು, ಜು. 19:** ಹಲವು ಭಾಷೆಗಳಲ್ಲಿ 40 ಸಾವಿರಕ್ಕೂ ಅಧಿಕ ಗೀತೆಗಳನ್ನು ಹಾಡಿ. ಕನ್ನಡದಲ್ಲಿ ಮೂರು ಸಾವಿರಕ್ಕೂ ಅಧಿಕ ಗೀತೆಗಳು ಎಲ್ಲರ ಹೃದಯದಲ್ಲಿರುವಂತೆ ಮಾಡಿದ ಗಾನಕೋಗಿಲೆ ಎಸ್ ಜಾನಕಿ. ನನಗೆ ಅಭಿಮಾನಿಗಳೇ ಸಾಕು, ಅವರು ಆಶೀರ್ವಾದ ಒಂದೇ ಸಾಕು ಎಂದು ಪದ್ಮಭೂಷಣ ಪ್ರಶಸ್ತಿಯನ್ನು ವಿನಯ ದಿಂದ ತಿರಸ್ಕಾರ ಮಾಡಿದ ಗಾಯಕಿ ಎಲ್ಲರಿಗೂ ಸ್ಪೂರ್ತಿ ಎಂದು ಕಲಾ ಸಂಕುಲ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಮಾರುತಿ ಬಡಿಗೇರ ಹೇಳಿದರು.

ನಗರದ ಮನರಂಜನ ಕೇಂದ್ರದಲ್ಲಿ ಆಕಾಶ್ ಸಿಂಗಿಂಗ್ ಕರೋಕೆ ಸ್ಟುಡಿಯೋದಿಂದ ಏರ್ಪಡಿಸಿದ್ದ ಗಾಯಕಿ ಎಸ್. ಜಾನಕಿ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಕೊನೆಯ ಉಸಿರು ಬಿಟ್ಟಿದ್ದು, ಮೈಸೂರಿನಲ್ಲಿ ಅಂತ್ಯಕ್ರಿಯೆ ಆಗಿರೋದು ಅವರು ಕನ್ನಡ ನಾಡಿನ ಮೇಲೆ ಇಟ್ಟ ಒಂದು ಗೌರವ. ಕನ್ನಡಿಗರು ಅವರಿಗೆ ಕೊಟ್ಟಂತ ಗೌರವ ಅಭಿಮಾನ ಅವಿಸ್ಮರಣೆಯ ಎಂದರು.

ಬದುಕಿನ 88 ವರ್ಷದವರೆಗೆ ಇದ್ದ ಜಾನಕಿ ಅವರಿಗೆ ಸಂಗೀತವೇ ಒಂದು ರೋಗ ನಿರೋಧಕ ಶಕ್ತಿಯಾಗಿತ್ತು. ಪ್ರೇಮಗೀತೆಗಳು ವಿರಹ ಗೀತೆಗಳು ಭಕ್ತಿ ಗೀತೆಗಳು ಜಾನಪದ ಗೀತೆಗಳು ಹಲವಾರು ಗೀತೆಗಳು ಮಾಡಿ ಜನಮನ ಗೆದಿದ್ದರು ಎಂದು ತಿಳಿಸಿದರು.

ಇದಕ್ಕೂ ಮೊದಲು ಎಸ್. ಜಾನಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಭಾನುವಾರ ನಿಧನರಾದ ರಾಯಚೂರಿನ ಮಾಜಿ ಶಾಸಕ ಸಯ್ಯದ್ ಯಾಸೀನ್ ಅವರ ಆತ್ಮಕ್ಕೆ ಶಾಂತಿ ಮೌನ ಆಚರಿಸಲಾಯಿತು.

ನರಸಪ್ಪ ಆಶಾಪುರ, ಶ್ರೀದೇವಿ ವಸಂತ್ ರಾಜ್, ಡಾ. ಭಾಸ್ಕರ, ಮೋಹ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ವಾಣಿಶ್ರೀ, ಪ್ರತಾಪರೆಡ್ಡಿ, ರಾಮುಲು ನಾಯಕ, ಖಾಜಾ ಅಸ್ಲಾಂ, ಚಿರಂಜೀವಿ ಯಾದವ, ಸಂತೋಷಿ, ಹೇಮಲತಾ, ಲಕ್ಷ್ಮಣ ಮತ್ತು ಆಕಾಶ್ ಸಿಂಗಿಂಗ್ ಸ್ಟುಡಿಯೋ ಅಧ್ಯಕ್ಷರು ಸುನೀಲ್ ಕುಮಾರ್ ಎಸ್. ಜಾನಕಿ ಅವರ ಚಿತ್ರಗೀತೆಗಳನ್ನು ರಾಯಚೂರು ನಗರದ ಗಾಯಕರು ಹಾಡಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.




ಹೋರಾಟಗಾರ ಸೋನಮ್ ವಾಂಗ್‌ಚುಕ್ ಅವರನ್ನು ಬೆಂಬಲಿಸಿ ಜಿರಳೆ ಜನತಾ ಪಕ್ಷ (ಸಿಜೆಪಿ) ಸದಸ್ಯರು ಭಾನುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

# ಸ್ವಾವಲಂಬಿ ಜೀವನಕ್ಕೆ ಫಿಸಿಯೋಥೆರಪಿ ಸಹಕಾರಿ ಉಪಕರಣಗಳ ಲೋಕಾರ್ಪಣೆ



**ವಿಜಯಪುರ, ಜು.19–** ಫಿಸಿಯೋಥೆರಪಿ ಉಪಕರಣಗಳು ರೋಗಿಗಳಿಗೆ ಗುಣಮಟ್ಟದ ಹಾಗೂ ಪರಿಣಾಮಕಾರಿ ಚಿಕಿತ್ಸೆ ನೀಡಲು ಹಾಗೂ ರೋಗಿಗಳಿಗೆ ಪುನರ್ವಸತಿ ಹಾಗೂ ಸ್ವಾವಲಂಬಿ ಜೀವನ ನಡೆ ಸಲು ಸಹಕಾರಿಯಾಗಲಿವೆ ಎಂದು ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಹೇಳಿದರು.

ಜಿಲ್ಲಾ ಆಸ್ಪತ್ರೆಯು, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದಡಿ ಫಿಸಿಯೋಥೆರಪಿ ಉಪಕರಣಗಳನ್ನು ಮೆದುಳಿನ ಪಾರ್ಶ್ವವಾಯು, ತಲೆಗಾಯ, ಪಾರ್ಕಿನ್ಸನ್ ಕಾಯಿಲೆ, ಇತರೆ ನರ ಸಂಬಂಧಿತ ಕಾಯಿಲೆಗಳು ಹಾಗೂ ಇತರ ನರವೈದ್ಯಕೀಯ ಸಮಸ್ಯೆಗಳಿಂದ ಬಳಲುವ ರೋಗಿಗಳಿಗೆ ಈ ಫಿಸಿಯೋಥೆರಪಿ ಉಪಕರಣಗಳು ಪ್ರಮುಖ ಪಾತ್ರ ವಹಿಸುತ್ತವೆ. ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಅರ್ಚನಾ ಕುಲಕರ್ಣಿ ಮಾತನಾಡಿ, ಉಜ್ಜೀವನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮಾರ್ಗದರ್ಶನದಿಂದ ಈ ಉಪಕರಣಗಳನ್ನು ನೀಡಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಹಾಗೂ ಬ್ಯಾಂಕ್ ಸಿಬ್ಬಂದಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಿದ ಅವರು, ಕರ್ನಾಟಕ ಬ್ರೇನ್ ಹೆಲ್ತ್ ಇನಿಷಿ ಯೇಟಿವ್‌ನ ಉದ್ದೇಶವಾದ ಮೆದುಳಿನ ಆರೋಗ್ಯ ಸೇವೆಗಳು ಜನಸಾಮಾನ್ಯರಿಗೆ ಸುಲಭವಾಗಲಿ. ಮೆದುಳು ಆರೋಗ್ಯ ವಿಭಾಗದಿಂದ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಿಲ್ಲಾ ಸಂಯೋಜಕರಾದ ಆನಂದ ರಾಠೋಡ ಹಾಗೂ ಕ್ಲಿನಿಕಲ್ ಸೈಕೋಲಾಜಿಸ್ಟ್ ನಬೀಸಾಬ ಜೈನಾಪುರ ಅವರು, ತಲೆನೋವು, ಅಪಸ್ಮಾರ, ಬುದ್ಧಿ ಮಾಂದ್ಯತೆ, ಪಾರ್ಶ್ವವಾಯು ಹಾಗೂ ಇತರೆ ನರರೋಗ ಸಂಬಂಧಿತ ಕಾಯಿಲೆಗಳ ಬಗ್ಗೆ ಮಾಹಿತಿ ನೀಡಿದರು. ಟೆಲಿ–ನ್ಯೂರಾಲಜಿ, ಟೆಲಿ–ರಿಹ್ಯಾ ಬಿಲಿಟೇಶನ್ ಫಿಸಿಯೋಥೆರಪಿ ಸೇವೆಗಳ ಲಭ್ಯತೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

# ಸ್ವಚ್ಛತೆಗೆ ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ



**ರಾಯಚೂರು, ಜು.'9–** ನಗರದ ಸ್ವಚ್ಛತೆ ಮತ್ತು ಸುಂದರ ಪರಿಸರ ನಿರ್ಮಾಣದ ಉದ್ದೇಶ ದಿಂದ ಮಹಾನಗರ ಪಾಲಿಕೆ ಆಧುನಿಕ ರಸ್ತೆ ಕಸಗುಡಿಸುವ ಯಂತ್ರದ ಪ್ರಾಯೋಗಿಕ ಪ್ರದರ್ಶನ ನಡೆಸಿದ್ದು, ಶೀಘ್ರದಲ್ಲಿಯೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಹೊಸ ಯಂತ್ರವನ್ನು ಖರೀದಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ ಹೇಳಿದರು.

ನಗರದ ಲಿಂಗಸುಗೂರು ರಸ್ತೆಯಲ್ಲಿ ರಸ್ತೆ ಕಸಗುಡಿಸುವ ಯಂತ್ರದ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದ ಬಳಿಕ ಅವರು ಮಾತನಾಡಿ, ನಗರದ ಪ್ರಮುಖ ರಸ್ತೆಗಳು, ವಾಣಿಜ್ಯ ಪ್ರದೇಶಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಯಂತ್ರಗಳ ಮೂಲಕ ಸ್ವಚ್ಛತಾ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕೈಗೊಳ್ಳುವ ಉದ್ದೇಶ ಹೊಂದಲಾಗಿದೆ. ನಗರದಲ್ಲಿ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಸ್ತೆಗಳಲ್ಲಿ ದೂಳು ಮತ್ತು ಕಸ ಸಂಗ್ರಹವಾಗುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ರಸ್ತೆಗಳಲ್ಲಿ ಸಂಗ್ರಹವಾಗಿರುವ ದೂಳು, ಪ್ಲಾಸ್ಟಿಕ್ ತ್ಯಾಜ್ಯ, ಒಣ ಎಲೆಗಳು ಸೇರಿದಂತೆ ವಿವಿಧ ರೀತಿಯ ಕಸವನ್ನು ಈ ಯಂತ್ರವು ವೇಗವಾಗಿ ಮತ್ತು ಸಮರ್ಪಕವಾಗಿ ತೆರವುಗೊಳಿಸುವ ಸಾಮರ್ಥ್ಯ ಹೊಂದಿದ್ದು, ನಗರ ಸ್ವಚ್ಛತೆ ಕಾಪಾಡಲು ಸಹಕಾರಿಯಾಗಲಿದೆ. ಸ್ವಚ್ಛತೆ ಕೇವಲ ಮಹಾನಗರ ಪಾಲಿಕೆಯ ಜವಾಬ್ದಾರಿಯಲ್ಲ; ಸಾರ್ವಜನಿಕರ ಸಹಭಾಗಿತ್ವವೂ ಅಗತ್ಯವಾಗಿದೆ. ಸಾರ್ವಜನಿಕರು ರಸ್ತೆ ಬದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯದೇ, ನಿಗದಿತ ಕಸದ ಬುಟ್ಟಿಗಳಲ್ಲಿಯೇ ತ್ಯಾಜ್ಯವನ್ನು ಹಾಕಬೇಕು ಎಂದು ಅವರು ಮನವಿ ಮಾಡಿದರು. ಯಂತ್ರಗಳ ಬಳಕೆಯಿಂದ ಸ್ವಚ್ಛತಾ ಕಾರ್ಯ ವೇಗವಾಗಿ ನಡೆಯುವುದರ ಜೊತೆಗೆ ಮಾನವ ಶ್ರಮವೂ ಕಡಿಮೆಯಾಗುತ್ತದೆ. ರಸ್ತೆಗಳಲ್ಲಿ ದೂಳು ಹರಡುವುದನ್ನು ತಡೆದು ಪರಿಸರ ಮಾಲಿನ್ಯ ನಿಯಂತ್ರಣಕ್ಕೂ ಇದು ಸಹಕಾರಿಯಾಗಲಿದೆ ಎಂದು ಹೇಳಿದರು.

# ಮಳೆಗಾಗಿ ವರುಣದೇವನಿಗೆ ಮೊರೆ: ಅಖಂಡ ಶಿವನಾಮ ಸಪ್ತಾಹ, ಗಂಗಾದೇವಿ ಪೂಜೆ



**ಬೀದರ, ಜು. 19:** ಮುಂಗಾರು ಆರಂಭವಾಗಿ ಒಂದೂವರೆ ತಿಂಗಳು ಕಳೆದರೂ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ಜಿಲ್ಲೆಯ ಭಾಲ್ಕಿ ತಾಲೂಕಿನ ಡೊಂಗರಗಿ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ಮಳೆಗಾಗಿ ವಿಶಿಷ್ಟ ಧಾರ್ಮಿಕ ಆಚರಣೆ ಮೂಲಕ ವರುಣ ದೇವನ ಮೊರೆ ಹೋಗಿದ್ದಾರೆ. ಮಳೆಯ ಕೊರತೆಯಿಂದ ಹೊಲಗಳಲ್ಲಿ ಬಿತ್ತನೆ ಮಾಡಿದ ಹೆಸರು, ಉದ್ದು, ಸೋಯಾಬೀನ್ ಸೇರಿದಂತೆ ವಿವಿಧ ಬೆಳೆಗಳು ಒಣಗುತ್ತಿವೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆ ಹಿನ್ನೆಲೆಯಲ್ಲಿ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಏಳು ದಿನಗಳ ಕಾಲ ಅಖಂಡ ಶಿವನಾಮ ಸಪ್ತಾಹ ಆಯೋಜಿಸಿ ನಿರಂತರ ಶಿವನಾಮ ಸ್ಮರಣೆ, ಭಜನೆ ಹಾಗೂ ವಿಶೇಷ ಪೂಜೆಗಳನ್ನು ನಡೆಸಲಾಯಿತು.

ಸಪ್ತಾಹದಲ್ಲಿ ಗ್ರಾಮದ ಮಹಿಳೆಯರು, ಪುರುಷರು ಹಾಗೂ ಯುವಕರು ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡು ಉತ್ತಮ ಮಳೆಯಾಗಲಿ, ರೈತರ ಬದುಕು ಹಸನಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು. ಸಪ್ತಾಹದ ಸಮಾರೋಪದ ಅಂಗವಾಗಿ ಭಾನುವಾರ ಗ್ರಾಮದ ಹನುಮಾನ ದೇವಸ್ಥಾನದಿಂದ ಮಾಂಜ್ರಾ ನದಿ ವರೆಗೆ ವಿಶೇಷ ಧಾರ್ಮಿಕ ಮೆರವಣಿಗೆ ನಡೆಯಿತು.

ಎರಡು ಕಿಲೋ ಮೀಟರ್ ದೂರದ ವರೆಗೆ ಭಜನೆ ಮಾಡುತ್ತ ಕಾಲ್ನಡಿಗೆಯಲ್ಲಿ ತೆರಳಿದ ಭಕ್ತರು ಗಂಗಾದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಾಂಜ್ರಾ ನದಿಯ ನೀರನ್ನು ಕೊಡಗಳಲ್ಲಿ ತುಂಬಿಕೊಂಡು ಪದಯಾತ್ರೆಯ ಮೂಲಕ ಗ್ರಾಮಕ್ಕೆ ತಂದು ಗ್ರಾಮದ ಐದು ಪ್ರಮುಖ ದೇವಾಲಯಗಳಲ್ಲಿ ಜಲಾಭಿಷೇಕ ನೆರವೇರಿಸಿದರು.

ಈ ಮೂಲಕ ವರುಣ ದೇವನ ಕೃಪೆಯಿಂದ ಉತ್ತಮ ಮಳೆಯಾಗಲಿ ಎಂಬ ಆಶಯ.

ಈ ವರ್ಷ ಆರಂಭದಲ್ಲಿ ಸುರಿದ ಅಲ್ಪ ಪ್ರಮಾಣದ ಮಳೆಯನ್ನು ನಂಬಿಕೊಂಡು ರೈತರು ಸಾಲ ಮಾಡಿ ಬೀಜ ಮತ್ತು ಗೊಬ್ಬರ ಖರೀದಿಸಿ ಬಿತ್ತನೆ ನಡೆಸಿದ್ದರು. ಆದರೆ ಬಳಿಕ ಮಳೆ ಕೈಕೊಟ್ಟ ಪರಿಣಾಮ ಬೆಳೆಗಳು ನೀರಿನ ಕೊರತೆಯಿಂದ ಬಾಡುತ್ತಿದ್ದು, ರೈತರ ಆತಂಕ ಹೆಚ್ಚಾಗಿದೆ. ಕೆಲವರು ಬೋರ್‌ವೆಲ್ ನೀರಿನ ಮೂಲಕ ಬೆಳೆ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಎಲ್ಲ ರೈತರಿಗೆ ಆ ಸೌಲಭ್ಯ ಲಭ್ಯವಿಲ್ಲ. ಹೀಗಾಗಿ ಪ್ರಕೃತಿಯ ಕೃಪೆಗಾಗಿ ಗ್ರಾಮಸ್ಥರು ಧಾರ್ಮಿಕ ಆಚರಣೆಗಳನ್ನು ನಡೆಸಿ ಮಳೆಯ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಅಖಂಡ ಶಿವನಾಮ ಸಪ್ತಾಹದ ವೇಳೆ ಗ್ರಾಮದಲ್ಲಿ ಭಕ್ತಿಮಯ ವಾತಾವರಣ ನಿರ್ಮಾಣವಾಗಿದ್ದು, ಎಲ್ಲೆಡೆ ಶಿವನಾಮದ ಘೋಷ ಮೊಳಗುತ್ತಿತ್ತು. ಈ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಒಗ್ಗಟ್ಟಿನಿಂದ ಪಾಲ್ಗೊಂಡು ಉತ್ತಮ ಮಳೆಯಾಗಿ ರೈತರ ಬೆಳೆಗಳು ಉಳಿಯಲೆಂದು ದೇವರಲ್ಲಿ ಪ್ರಾರ್ಥಿಸಿದರು.

# ಸಮಾಜದಲ್ಲಿ ಸಂಘಟನೆಗಳು ಬೆಳೆಯಬೇಕಲ್ಲದೇ ಸಂಘರ್ಷಗಳು ನಡೆಯಬಾರದು– ಶ್ರೀ ರಂಭಾಪುರಿ




**ಬೆಂಗಳೂರು–ಜು.19–**ಭಾರತ ದೇಶ ಹಲವಾರು ಧರ್ಮ ಸಂಪ್ರದಾಯ ಪರಂಪರೆಯ ನಾಡು. ಸಮಾಜದಲ್ಲಿ ಉತ್ತಮವಾದ ಸಂಘಟನೆಗಳು ಬೆಳೆದು ಬರುವ ಅವಶ್ಯಕತೆಯಿದೆ. ಆದರೆ ಸಂಘಟನೆ ಹೆಸರಿನಲ್ಲಿ ಸಂಘರ್ಷಗಳು ನಡೆಯಬಾರದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸಜ್ಜನರ ಅವಶ್ಯಕತೆ ಬಹಳಷ್ಟಿದೆ. ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ನೀತಿ ಸಂಹಿತೆ ಇಲ್ಲದ ಕಾರಣ ದಿಕ್ಕು ದಾರಿ ತಪ್ಪಿ ಮನುಷ್ಯ ನಡೆಯುತ್ತಿದ್ದಾನೆ. ಹುಟ್ಟುತ್ತಲೇ ಯಾರೂ ಅಯೋಗ್ಯರಲ್ಲ. ಸೂಕ್ತ ಸಂಸ್ಕಾರ ದೊರೆತರೆ ಎಲ್ಲರೂ ಯೋಗ್ಯರಾಗಬಲ್ಲರು. ಸೌಹಾರ್ದಯುತ ಸಹಬಾಳ್ವೆ ಜೀವನದ ಉಸಿರಾಗಲಿ. ಪ್ರತಿಯೊಬ್ಬರೂ ಸಹನೆ ಸಹಕಾರ ಮನೋಭಾವದಿಂದ ಸಂಘಟಿತರಾಗಿ ಬದುಕು ಸಾಗಿಸಿದರೆ ಜನ್ಮ ಸಾರ್ಥಕಗೊಳ್ಳುತ್ತದೆ. ಖಾದಿ ಖಾಕಿ ಮತ್ತು ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಒಗ್ಗಟ್ಟಿನಿಂದ ಶ್ರಮಿಸಿದರೆ ಜನಕಲ್ಯಾಣದ ಜೊತೆಗೆ ಲೋಕ ಕಲ್ಯಾಣ ಕಾರ್ಯಗಳು ನಡೆಯುವುದರಲ್ಲಿ ಯಾವುದೇ ಸಂದೇಹವಿಲ್ಲ. ಪ್ರಕೃತಿ ಮಾನವನನ್ನು ಸೃಷ್ಟಿಸಿದರೆ ಸಂಸ್ಕಾರ ಆದರ್ಶ ಮಾನವರನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ತತ್ವ ಸಿದ್ಧಾಂತ ಮತ್ತು 12ನೇ ಶತಮಾನದ ಬಸವಾದಿ ಶರಣರ ಶ್ರಮವನ್ನು ಸಮಾಜ ಬಾಂಧವರು ಮರೆಯಬಾರದು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾಜಿ ಸಚಿವ ಶಾಸಕ ಸಿ.ಎಸ್.ನಾಡಗೌಡ ಮಾತನಾಡಿ ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ಮೌಲ್ಯಗಳು ಯಾವಾಗಲೂ ಶಾಶ್ವತವಾಗಿರುತ್ತವೆ. ಇಂದು ಮನುಷ್ಯನಲ್ಲಿ ತಾಳ್ಮೆ ಮತ್ತು ಸಹನೆಯ ಗುಣ ಇಲ್ಲದಿರುವುದು ಅಶಾಂತಿ ಅತೃಪ್ತಿಗಳಿಗೆ ಕಾರಣವೆಂದರೆ ತಪ್ಪಾಗದು. ಮನೆ ಮನಗಳಲ್ಲಿ ಒಗ್ಗಟ್ಟು ಮೂಡಿ ಬಿಕ್ಕಟ್ಟು ದೂರವಾದಾಗ ಏನೆಲ್ಲ ಸಾಧನೆ ಮಾಡಲು ಸಾಧ್ಯ. ಶ್ರೀ ರಂಭಾಪುರಿ ಜಗದ್ಗುರುಗಳು ನಿರಂತರ

# ಹುಲಿ–ಸಿಂಹಗಳ ಘರ್ಜನೆ ಶುರು: 13 ದಿನಗಳಲ್ಲಿ 3.24 ಲಕ್ಷ ಆದಾಯ



**ಕಲಬುರಗಿ, ಜು. 19:** ಜಿಲ್ಲೆಯ ಹೊರವಲಯದ ಮಾಡಬೂಳ ಸಮೀಪ ನಿರ್ಮಿಸಿರುವ 'ಕಲಬುರಗಿ ಮೃಗಾಲಯ'ದಲ್ಲಿ ಈಗ ಹುಲಿ–ಸಿಂಹಗಳ ಘರ್ಜನೆ ಶುರುವಾಗಿದೆ. ಬಿಸಿಲು ನಾಡಿನ ಈ ಮೃಗಾಲಯದಲ್ಲಿ 'ಸಿಂಹಗಳು' ಜನರನ್ನು ಆಕರ್ಷಿಸುತ್ತಿದ್ದು, ಮೃಗಾಲಯಕ್ಕೆ ಭೇಟಿ ನೀಡುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಮೃಗಾಲಯ ಆರಂಭವಾದ ಕೇವಲ 13 ದಿನಗಳಲ್ಲಿ 4,232 ಪ್ರಾಣಿಪ್ರಿಯರು ಭೇಟಿ ನೀಡಿದ್ದಾರೆ. ಇದರಲ್ಲಿ 3,400 ವಯಸ್ಕರು ಹಾಗೂ 823 ಮಕ್ಕಳು ಸೇರಿದ್ದಾರೆ. ಟಿಕೆಟ್ ದರ, ಬ್ಯಾಟರಿ ವಾಹನ ಬಳಕೆ, ಪಾರ್ಕಿಂಗ್ ಸೇರಿದಂತೆ ಒಟ್ಟು 13.24 ಲಕ್ಷ ವರಮಾನ ಹರಿದುಬಂದಿದೆ.

ಕಲಬುರಗಿ ನಗರದ ಸಾರ್ವಜನಿಕ ಉದ್ಯಾನದಲ್ಲಿ 1988ರಲ್ಲಿ ಕಿರು ಮೃಗಾಲಯ ಹಾಗೂ ಮಕ್ಕಳ ಉದ್ಯಾನ ಸ್ಥಾಪನೆಯಾಗಿತ್ತು. 6 ಎಕರೆ 33 ಗುಂಟೆ ಪ್ರದೇಶದಲ್ಲಿ ಹಲವು ಬಗೆಯ ಪ್ರಾಣಿ–ಪಕ್ಷಿಗಳಿದ್ದವು. ಅವುಗಳ 'ಸ್ವಚ್ಛಂದ' ಬದುಕಿಗೆ ಸಾಕಷ್ಟು ಸ್ಥಳಾವಕಾಶ ಅಲ್ಲಿ ಇರಲಿಲ್ಲ. ಆಗ ಪ್ರವಾಸೋದ್ಯಮ ಸಚಿವರಾಗಿದ್ದ ಪ್ರಿಯಾಂಕ್ ಖರ್ಗೆ ಬೇರೊಂದು 'ಕಿರು ಮೃಗಾಲಯ'ವನ್ನು ಸ್ಥಳಾಂತರಿಸಿ ವಿಸ್ತರಿಸಲು ತೀರ್ಮಾನಿಸಿದ್ದರು.

ಅದರಂತೆ ನಗರದ ಹೊರವಲಯದ ಮಾಡಬೂಳ ಗ್ರಾಮದಲ್ಲಿ 42 ಎಕರೆ 38 ಗುಂಟೆ ಜಾಗದಲ್ಲಿ 'ಕಲಬುರಗಿ ಮೃಗಾಲಯ' ಸ್ಥಾಪಿಸಲಾಗಿದ್ದು, ಮೇ 18ರಂದು ಅಂದು ಅರಣ್ಯ ಸಚಿವರಾಗಿದ್ದ ಈಶ್ವರ ಖಂಡ್ರೆ ಅವರು ಉದ್ಘಾಟಿಸಿದ್ದರು. ಹೊಸ ಮೃಗಾಲಯದಲ್ಲಿ ಸದ್ಯ 13 ವಿವಿಧ ಜಾತಿಯ 83 ಪ್ರಾಣಿ ಮತ್ತು ಪಕ್ಷಿಗಳಿದ್ದು, ಜನರನ್ನು ಆಕರ್ಷಿಸುತ್ತಿವೆ.

ಜಿಲ್ಲೆಯಲ್ಲಿ ಈ ವರ್ಷ ಮಳೆ ಕಡಿಮೆಯಾಗಿದೆ. ಈತನವೂ ವಾತಾವರಣ ತಂಪಾಗಿರಲಿಲ್ಲ. ಇದೀಗ ಮಳೆಯಿಲ್ಲವಾದರೂ ವಾತಾವರಣ ತಂಪಾಗಿದ್ದು, ಮೃಗಾಲಯಕ್ಕೆ ಭೇಟಿ ನೀಡುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ವಾರಂತ್ಯ, ರಜಾ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ಪ್ರಾಣಿ ಪಕ್ಷಿಗಳ ವೀಕ್ಷಣೆಗೆ ಬರುತ್ತಿದ್ದಾರೆ.

ಕಳೆದ ಭಾನುವಾರ (ಜು.12ರಂದು) 1,089 ಮಂದಿ ಭೇಟಿ ನೀಡಿದ್ದರು ಎಂದು ಮೃಗಾಲಯದ ಅಧಿಕಾರಿಗಳು ಹೇಳುತ್ತಾರೆ ಡಿಸಿಎಫ್ ಆಶಿಶ್ ರೆಡ್ಡಿ. ಮೃಗಾಲಯಕ್ಕೆ ನಿರೀಕ್ಷೆಯನ್ನೂ ಮೀರಿ ಪ್ರಾಣಿ ಪ್ರಿಯರು ಭೇಟಿ ನೀಡುತ್ತಿದ್ದಾರೆ. ತಿಂಗಳಾಂತ್ಯಕ್ಕೆ ಇನ್ನಷ್ಟು ಪ್ರಾಣಿಗಳು ಮೃಗಾಲಯಕ್ಕೆ ಬರಲಿವೆ ಎಂದು ಆರ್‌ಎಫ್‌ಒ ನಾಗೇಶ ಹಡಪದ ಹೇಳಿದರು.

ಮೃಗಾಲಯಕ್ಕೆ ಬಂದಿರುವ ಕ್ವಾರಂಟೈನ್ ಮುಗಿಸಿರುವ ಸಿಂಹಗಳನ್ನು ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ. ವೀಕ್ಷಕರ ಭೇಟಿಗೆ ಟಿಕೆಟ್ ಕೂಡ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

**ಇನ್ನಷ್ಟು ಪ್ರಾಣಿಗಳು ಶೀಘ್ರ:** ಮೈಸೂರಿನಿಂದ ಗೋಲ್ಡನ್ ಫೀಸಂಟ್, ಲೇಡಿ ಅಮ್ಹೆರಸ್ಟ್ ಫೀಸಂಟ್ ಪಕ್ಷಿಗಳು, ಶಿವಮೊಗ್ಗದಿಂದ ರೆಡ್‌ಜಂಗಲ್ ಫೌಲ್ ಹುಂಜ, ಬನ್ನೇರು ಘಟ್ಟದಿಂದ ಬಬೂನ್, ತೋಳ, ಗದುಗಿನಿಂದ ಚುಕ್ಕೆ ಜಿಂಕೆಗಳನ್ನು ತರಲು ಒಪ್ಪಂದ ನಡೆದಿದೆ. ಈ ತಿಂಗಳಾಂತ್ಯದ ಹೊತ್ತಿಗೆ ಅವು ಮೃಗಾಲಯಕ್ಕೆ ಆಗಮಿಸುವುದರೊಂದಿಗೆ ಮೃಗಾಲಯದ ಕಳೆ ಹೆಚ್ಚಿಸಲಿವೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಮೈಸೂರಿನಿಂದ ಜಿಬ್ರಾ, ಬನ್ನೇರುಘಟ್ಟದಿಂದ ಹುಲಿಗಳು, ಸಾಂಬರ್ ತರಲು ಅನುಮತಿ ಕೇಳಲಾಗಿದೆ. ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮತಿ ಸಿಕ್ಕ ತಕ್ಷಣವೇ ಅವುಗಳನ್ನೂ ಕಲಬುರಗಿಯ ಮೃಗಾಲಯಕ್ಕೆ ತರಲಾಗುವುದು

**ಭೇಟಿ ಸಮಯ, ಟಿಕೆಟ್ ದರ:** ಮೃಗಾಲಯವು ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ತೆರೆದಿರುತ್ತದೆ. ಕೌಂಟರ್‌ನಲ್ಲಿ ಸಂಜೆ 5 ಗಂಟೆ ತನಕ ಮಾತ್ರವೇ ಟಿಕೆಟ್ ವಿತರಿಸಲಾಗುತ್ತದೆ. ಮೃಗಾಲಯಕ್ಕೆ ಪ್ರತಿ ಮಂಗಳವಾರ ರಜೆ ಇರುತ್ತದೆ. 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ 40, 12 ವರ್ಷ ಮೇಲ್ಪಟ್ಟವರಿಗೆ 75 ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 25 ಟಿಕೆಟ್ ದರ ನಿಗದಿಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

# ಸಂಸತ್ ಅಧಿವೇಶನ ಹಿನ್ನೆಲೆ: ಸರ್ವಪಕ್ಷ ಸಭೆಯಲ್ಲಿ ಪ್ರತಿಪಕ್ಷಗಳ ಸಭಾತ್ಯಾಗ, ಸರ್ಕಾರದ ಧೋರಣೆಗೆ ಖಂಡನೆ




**ನವದೆಹಲಿ, ಜು.19:** ಸಂಸತ್ತಿನ ಮುಂಗಾರು ಅಧಿವೇಶನಕ್ಕೂ ಮುನ್ನ ಭಾನುವಾರ ನಡೆದ ಕೇಂದ್ರದ ಸರ್ವಪಕ್ಷ ಸಭೆಯ ಮುಂದೆ ವಿರೋಧ ಪಕ್ಷಗಳ ಸಂಕ್ಷಿಪ್ತ ವಾಕ್ ಔಟ್ ನಡೆಯಿತು. ಲೋಕಸಭೆ ಸ್ಪೀಕರ್ ಅವರ ಪರಿಗಣನೆಯಲ್ಲಿ ಉಳಿದಿರುವ ಸ್ಥಾನಮಾನದ ಹೊರತಾಗಿಯೂ ನರೇಂದ್ರ ಮೋದಿ ಸರ್ಕಾರವು ಬಂಡಾಯ ತೃಣಮೂಲ ಕಾಂಗ್ರೆಸ್ ಸಂಸದರ ಗುಂಪನ್ನು ಕಾನೂನುಬದ್ಧಗೊಳಿಸಿದೆ ಎಂದು ಕಾಂಗ್ರೆಸ್ ಆರೋಪಿಸಿತು. ಸೋಮವಾರ ಪ್ರಾರಂಭವಾಗುವ ಮುಂಗಾರು ಅಧಿವೇಶನಕ್ಕೆ ಒಂದು ದಿನ ಮೊದಲು ಸರ್ಕಾರವು ರಾಜಕೀಯ ಪಕ್ಷಗಳಿಂದ ಸಹಕಾರ ಪಡೆಯಲು ಮತ್ತು ಆಗಸ್ಟ್ 13 ರವರೆಗೆ ನಡೆಯುವ ಅಧಿವೇಶನಕ್ಕಾಗಿ ಅದರ ಶಾಸಕಾಂಗ ಕಾರ್ಯಸೂಚಿಯನ್ನು ಚರ್ಚಿಸಲು ಸಭೆಯನ್ನು ಕರೆದಿದೆ. ಇತ್ತೀಚೆಗೆ ಮುಕ್ತಾಯಗೊಂಡ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿನ ನಂತರ ತೃಣಮೂಲ ಕಾಂಗ್ರೆಸ್‌ನ 20 ಬಂಡಾಯ ಲೋಕಸಭಾ ಸಂಸದರು ರಚಿಸಿದ ರಾಷ್ಟ್ರೀಯತಾವಾದಿ ನಾಗರಿಕರ ಪಕ್ಷ (ಎನ್‌ಸಿಪಿಐ)ವನ್ನು ಆಹ್ವಾನಿಸುವ ಸರ್ಕಾರದ ನಿರ್ಧಾರದ ವಿರುದ್ಧ ವಿರೋಧ ಪಕ್ಷದ ವಾಕ್ ಔಟ್ ಪ್ರತಿಭಟನೆಯಾಗಿದೆ ಎಂದು ಕಾಂಗ್ರೆಸ್ ಸಂವಹನ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. "ಸರ್ವಪಕ್ಷ ಸಭೆಯಿಂದ ಎಲ್ಲಾ ವಿರೋಧ ಪಕ್ಷಗಳು ಕೆಲವು ನಿಮಿಷಗಳ ಕಾಲ ಹೊರನಡೆದವು. ಸ್ಪೀಕರ್ ಬಳಿ ಅಂತಿಮ ನಿರ್ಧಾರ ಬಾಕಿ ಇರುವಾಗ 20 'ಬಂಡಾಯ' ಟಿಎಂಸಿ ಸಂಸದರಿಗೆ ಪಾರ್ಕಿಂಗ್ ಸ್ಥಳವಾಗಿರುವ ಎನ್‌ಸಿಪಿಐ ಅನ್ನು ಆಹ್ವಾನಿಸುವ ಮೋದಿ ಸರ್ಕಾರದ ನಿರ್ಧಾರಕ್ಕೆ ಇದು ಪ್ರತಿಭಟನೆಯ ಸಂಕೇತವಾಗಿತ್ತು" ಎಂದು ರಮೇಶ್ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ರಮೇಶ್ ಅವರ ಪ್ರಕಾರ, ಎನ್‌ಸಿಪಿಐ ಅನ್ನು ಆಹ್ವಾನಿಸುವ ಕೇಂದ್ರದ ನಿರ್ಧಾರವು ಬಂಡಾಯ ಸಂಸದರನ್ನು ಗುರುತಿಸುವುದಕ್ಕೆ ಸಮನಾಗಿರುತ್ತದೆ, ಅವರ ಸ್ಥಾನಮಾನದ ಕುರಿತ ಅರ್ಜಿಗಳು ಇನ್ನೂ ಲೋಕಸಭಾ ಸ್ಪೀಕರ್ ಅವರಿಂದ ಅಂತಿಮ ನಿರ್ಧಾರಕ್ಕಾಗಿ ಕಾಯುತ್ತಿವೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಸೋಲಿನ ನಂತರದ ರಾಜಕೀಯ ಬೆಳವಣಿಗೆಗಳಿಂದ ಈ ವಿವಾದ ಉಂಟಾಗಿದೆ, ನಂತರ ಅದರ ಲೋಕಸಭಾ ಸಂಸದರ ಒಂದು ಭಾಗವು ಎನ್‌ಸಿಪಿಐ ಅನ್ನು ರಚಿಸಲು ಬೇರ್ಪಟ್ಟಿತು. ತೃಣಮೂಲ ಕಾಂಗ್ರೆಸ್ ಬಂಡಾಯ ಶಾಸಕರ ಸ್ಥಾನಮಾನವನ್ನು ಪ್ರಶ್ನಿಸಿ ಅವರ ಅನರ್ಹತೆಗೆ ಒತ್ತಾಯಿಸಿದೆ, ಈ ವಿಷಯವು ಪ್ರಸ್ತುತ ಸ್ಪೀಕರ್ ಮುಂದೆ ಬಾಕಿ ಇದೆ. ಸ್ಪೀಕರ್ ತೀರ್ಪಿನ ಮೊದಲು ಎನ್‌ಸಿಪಿಐಗೆ ಆಹ್ವಾನವನ್ನುನೀಡುವುದು ಸ್ಥಾಪಿತ ಸಂಸದೀಯ ಸಂಪ್ರದಾಯಗಳನ್ನು ಹಾಳು ಮಾಡುತ್ತದೆ ಎಂದು ವಿರೋಧ ಪಕ್ಷಗಳು ವಾದಿಸಿವೆ. ಮಳೆಗಾಲದ ಅಧಿವೇಶನವು ಪಶ್ಚಿಮ ಬಂಗಾಳದ ರಾಜಕೀಯ ಬೆಳವಣಿಗೆಗಳು, ಭ್ರಷ್ಟಾಚಾರ, ಹಣದುಬ್ಬರ, ನಿರುದ್ಯೋಗ ಮತ್ತು ಸಾರ್ವಜನಿಕ ಕಾಳಜಿಯ ಇತರ ವಿಷಯಗಳು ಸೇರಿದಂತೆ ಖಜಾನೆ ಮತ್ತು ವಿರೋಧ ಪಕ್ಷದ ಪೀಠಗಳ ನಡುವೆ ತೀವ್ರ ಘರ್ಷಣೆಯನ್ನು ಕಾಣುವ ನಿರೀಕ್ಷೆಯಿದೆ. ಅಧಿವೇಶನದ ಸಮಯದಲ್ಲಿ ಸರ್ಕಾರವು ಹಲವಾರು ಪ್ರಮುಖ ಮಸೂದೆಗಳನ್ನು ಪರಿಚಯಿಸುವ ನಿರೀಕ್ಷೆಯಿದೆ, ಸಂಸತ್ತು ಸಭೆ ಸೇರುವ ಮೊದಲು ಒಮ್ಮತವನ್ನು ನಿರ್ಮಿಸುವಲ್ಲಿ ಸರ್ವಪಕ್ಷ ಸಭೆಯನ್ನು ಪ್ರಮುಖ ಪಾತ್ರ ವಹಿಸುತ್ತದೆ.

# ಪ್ರತಿಭಟನೆ ಬದಲಾಗಿ ಚರ್ಚೆಗೆ ಬನ್ನಿ, ಸಂಸತ್ ಕಲಾಪ ಸುಗಮಕ್ಕೆ ಸಹಕರಿಸಿ: ರಿಜಿಜು ಮನವಿ



**ನವದೆಹಲಿ, ಜುಲೈ 19:** ಮಳೆಗಾಲದ ಅಧಿವೇಶನದಲ್ಲಿ ಸಂಸತ್ತಿನ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳು, ವಿಶೇಷವಾಗಿ ಪ್ರತಿಪಕ್ಷಗಳನ್ನು, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ಒತ್ತಾಯಿಸಿದರು, ರಚನಾತ್ಮಕ ಚರ್ಚೆ ಮತ್ತು ಸಹಕಾರವು ದೇಶದ ಹಿತದೃಷ್ಟಿಯಿಂದ ಇರುತ್ತದೆ ಎಂದು ಹೇಳಿದರು. ಜುಲೈ 20 ರಂದು ಪ್ರಾರಂಭವಾಗುವ ಅಧಿವೇಶನಕ್ಕೂ ಮುನ್ನ ಕೇಂದ್ರವು ಕರೆದಿದ್ದ ಸರ್ವಪಕ್ಷ ಸಭೆಯ ನಂತರ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ರಿಜಿಜು, ಸಂಸತ್ತು ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಸೇರಿದ್ದು ಮತ್ತು ಶಾಸಕಾಂಗ ವ್ಯವಹಾರದಲ್ಲಿ ಸಕಾರಾತ್ಮಕವಾಗಿ ಭಾಗವಹಿಸುವಂತೆ ರಾಜಕೀಯ ವರ್ಣಪಟಲದಾದ್ಯಂತದ ಸದಸ್ಯರಿಗೆ ಮನವಿ ಮಾಡಿದರು. "ಈ ಮಳೆಗಾಲದ ಅಧಿವೇಶನದ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳು ಕೊಡುಗೆ ನೀಡಲು ಮತ್ತು ಸಹಕರಿಸಲು ನಾನು ಮನವಿ ಮಾಡುತ್ತೇನೆ. ಸಂಸತ್ತು ಎಲ್ಲರಿಗೂ ಸೇರಿದೆ. ಸರ್ಕಾರವು ವಿವಿಧ ಶಾಸಕಾಂಗ ವ್ಯವಹಾರಗಳು ಮತ್ತು ಮಸೂದೆಗಳನ್ನು ಪರಿಚಯಿಸಲಿದೆ, ಮತ್ತು ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳ ಎಲ್ಲಾ ಸದಸ್ಯರು ರಚನಾತ್ಮಕವಾಗಿ ಭಾಗವಹಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಸಂಸತ್ತು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ, ಅದು ದೇಶಕ್ಕೆ ಉತ್ತಮವಾಗಿರುತ್ತದೆ" ಎಂದು ಅವರು ಹೇಳಿದರು. ಪದೇ ಪದೇ ಕಲಾಪಗಳು ನಡೆಯುತ್ತಿದ್ದಾಗ ಉಂಟಾಗುತ್ತಿದ್ದ ಅಡಚಣೆಗಳನ್ನು ಕೊನೆಗೊಳಿಸಬೇಕೆಂದು ಕರೆ ನೀಡಿದ ಸಚಿವರು, ಹಿಂದಿನ ಅಧಿವೇಶನಗಳು ಸದನದೊಳಗೆ ನಿರಂತರ ಪ್ರತಿಭಟನೆಗಳಿಂದಾಗಿ ತೊಂದರೆ ಅನುಭವಿಸಿದ್ದವು ಎಂದು ಹೇಳಿದರು. ಇಂತಹ ತಂತ್ರಗಳು ವಿರೋಧ ಪಕ್ಷಗಳಿಗೆ ರಾಜಕೀಯವಾಗಿ ಪ್ರಯೋಜನವಾಗಲಿಲ್ಲ ಅಥವಾ ಸಾರ್ವಜನಿಕ ನಿರೀಕ್ಷೆಗಳನ್ನು ಈಡೇರಿಸಲಿಲ್ಲ. ವಿರೋಧ ಪಕ್ಷದ ಕಳವಳಗಳನ್ನು ಕೇಳಲು ಸರ್ಕಾರ ಸಿದ್ಧವಾಗಿದ್ದರೂ, ಅರ್ಥಪೂರ್ಣ ಸಂಸತ್ತಿನ ಕಲಾಪಗಳನ್ನು ಸುಗಮಗೊಳಿಸಲು ಪ್ರತಿಯಾಗಿ ಇದೇ ರೀತಿಯ ಸಹಕಾರವನ್ನು ನಿರೀಕ್ಷಿಸಲಾಗಿದೆ ಎಂದು ಅವರು ಒತ್ತಿ ಹೇಳಿದರು. "ಸರ್ಕಾರವು ವಿರೋಧ ಪಕ್ಷದ ಮಾತನ್ನು ಕೇಳಲು ಸಿದ್ಧವಾಗಿದೆ ಮತ್ತು ವಿರೋಧ ಪಕ್ಷವು ಸರ್ಕಾರದ ಮಾತನ್ನು ಕೇಳಬೇಕೆಂದು ಅದು ನಿರೀಕ್ಷಿಸುತ್ತದೆ. ಸದನವನ್ನು ಅಡ್ಡಿಪಡಿಸುವುದರಿಂದ ಎಲ್ಲರ ಸಮಯ ವ್ಯರ್ಥವಾಗುತ್ತದೆ ಮತ್ತು ತೆರಿಗೆದಾರರ ಹಣವನ್ನು ಬರಿದು ಮಾಡುತ್ತದೆ" ಎಂದು ಅವರು ಹೇಳಿದರು. ವಿರೋಧ ಪಕ್ಷಗಳು ಭಾಗವಹಿಸುವಿಕೆಯನ್ನು ವಿರೋಧಿಸಿ ಸಂಕ್ಷಿಪ್ತವಾಗಿ ಹೊರನಡೆದ ನಂತರ, ತೃಣಮೂಲ ಕಾಂಗ್ರೆಸ್‌ನ 20 ಬಂಡಾಯ ಲೋಕಸಭಾ ಸಂಸದರ ಗುಂಪಾದ ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾ (ಎನ್‌ಸಿಪಿಐ) ಅನ್ನು ಸರ್ವಪಕ್ಷ ಸಭೆಗೆ ಆಹ್ವಾನಿಸುವ ಕೇಂದ್ರದ ನಿರ್ಧಾರವನ್ನು ರಿಜಿಜು ಸಮರ್ಥಿಸಿಕೊಂಡರು. ಟೀಕೆಗೆ ಪ್ರತಿಕ್ರಿಯಿಸಿದ ಸಚಿವರು, ಲೋಕಸಭೆ ಸ್ಪೀಕರ್‌ನಿಂದ ಮಾನ್ಯತೆ ಪಡೆದ ರಾಜಕೀಯ ಗುಂಪನ್ನು ಸರ್ಕಾರ ನಿರ್ಲಕ್ಷಿಸಲು ಸಾಧ್ಯವಿಲ್ಲ ಮತ್ತು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ರಾಜಕೀಯ ರಚನೆಯು ತನ್ನ ಅಭಿಪ್ರಾಯಗಳನ್ನು ಮಂಡಿಸುವ ಹಕ್ಕನ್ನು ಹೊಂದಿದೆ ಎಂದು ಹೇಳಿದರು. "ಎಲ್ಲರನ್ನೂ ಆಹ್ವಾನಿಸುವುದು ಸರ್ಕಾರದ ಕರ್ತವ್ಯ. ಎನ್ಸಿಪಿಐ ಲೋಕಸಭಾ ಸ್ಪೀಕರ್‌ನಿಂದ ಮಾನ್ಯತೆ ಕೋರಿದೆ. ನೀವು ಅದನ್ನು ಹೇಗೆ ನಿರ್ಲಕ್ಷಿಸಬಹುದು? ಸಂಸದೀಯ ಪ್ರಜಾಪ್ರಭುತ್ವದಲ್ಲಿ ಎಲ್ಲಾ ಪಕ್ಷಗಳಿಗೂ ಮಾತನಾಡುವ ಹಕ್ಕಿದೆ. ಮಸೂದೆಗಳಿಗೆ ತಮ್ಮ ಸಕಾರಾತ್ಮಕ ಬೆಂಬಲವನ್ನು ನೀಡುವಂತೆ ನಾನು ಅವರನ್ನು ಒತ್ತಾಯಿಸುತ್ತೇನೆ. ಎಲ್ಲಾ ಪಕ್ಷಗಳು ರಾಷ್ಟ್ರಕ್ಕಾಗಿ ಒಟ್ಟಾಗಿ ಕೆಲಸ ಮಾಡಬೇಕು. ನಾವು ಅವರ ಸಲಹೆಗಳನ್ನು ಗಮನಿಸಿದ್ದೇವೆ" ಎಂದು ರಿಜಿಜು ಹೇಳಿದರು. ಭಿನ್ನಾಭಿಪ್ರಾಯಗಳ ಹೊರತಾಗಿಯೂ, ರಾಜಕೀಯವಾಗಿ ಪ್ರಭಾವಿತವಾದ ಮಳೆಗಾಲದ ಅಧಿವೇಶನದಲ್ಲಿ ಪ್ರಮುಖ ಶಾಸನಗಳನ್ನು ಅಂಗೀಕರಿಸಲು ಮತ್ತು ಪ್ರಮುಖ ಚರ್ಚೆಗಳನ್ನು ಸುಗಮಗೊಳಿಸಲು ಖಜಾನೆ ಮತ್ತು ವಿರೋಧ ಪಕ್ಷದ ಪೀಠಗಳು ಒಟ್ಟಾಗಿ ಕೆಲಸ ಮಾಡುತ್ತವೆ ಎಂದು ರಿಜಿಜು ವಿಶ್ವಾಸ ವ್ಯಕ್ತಪಡಿಸಿದರು.

# ಜಮ್ಮು-ಕಾಶ್ಮೀರದಲ್ಲಿ ಭಾರಿ ಪ್ರವಾಹ, ಸಂತ್ರಸ್ತರ ನೆರವಿಗೆ ಸಂಘಟಿತ ಪರಿಹಾರ ಕಾರ್ಯ: ಮಲ್ಲಿಕಾರ್ಜುನ ಖರ್ಗೆ ಕರೆ



**ನವದೆಹಲಿ, ಜುಲೈ 19:** ಜಮ್ಮು ಮತ್ತು ಕಾಶ್ಮೀರದ ಜಮ್ಮು ವಿಭಾಗದಲ್ಲಿ, ವಿಶೇಷವಾಗಿ ಪೂಂಚ್ ಮತ್ತು ರಾಜೌರಿ ಜಿಲ್ಲೆಗಳಲ್ಲಿ, ಹಠಾತ್ ಪ್ರವಾಹ ಮತ್ತು ನಿರಂತರ ಮಳೆಯಿಂದ ಉಂಟಾದ ಜೀವಹಾನಿ ಮತ್ತು ದೊಡ್ಡ ಪ್ರಮಾಣದ ವಿನಾಶದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದು ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಸಂತ್ರಸ್ತ ಕುಟುಂಬಗಳಿಗೆ ತಕ್ಷಣದ ರಕ್ಷಣೆ, ಪರಿಹಾರ ಮತ್ತು ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವಂತೆ ಕರೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ, ಖರ್ಗೆ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ತಮ್ಮ ಹೃತ್ಪೂರ್ವಕ ಸಂತಾಪ ಸೂಚಿಸಿದ್ದಾರೆ ಮತ್ತು ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ. "ಜಮ್ಮು ಮತ್ತು ಕಾಶ್ಮೀರದ ಜಮ್ಮು ವಿಭಾಗದಲ್ಲಿ, ವಿಶೇಷವಾಗಿ ಪೂಂಚ್ ಮತ್ತು ರಾಜೌರಿಯಲ್ಲಿ, ಹಠಾತ್ ಪ್ರವಾಹ ಮತ್ತು ನಿರಂತರ ಮಳೆಯಿಂದ ಉಂಟಾದ ದುರಂತ ಜೀವಹಾನಿ ಮತ್ತು ವಿನಾಶದಿಂದ ನಾನು ತೀವ್ರವಾಗಿ ದುಃಖಿತನಾಗಿದ್ದೇನೆ. ಮೃತ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಮತ್ತು ಪೀಡಿತ ಎಲ್ಲರ ಸುರಕ್ಷತೆಗಾಗಿ ನಾನು ಪ್ರಾರ್ಥಿಸುತ್ತೇನೆ" ಎಂದು ಅವರು ಹೇಳಿದರು. ಕಾಂಗ್ರೆಸ್ ಅಧ್ಯಕ್ಷರು ಕೇಂದ್ರ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ಕಚೇರಿಯು ಜಮ್ಮು ಮತ್ತು ಕಾಶ್ಮೀರ ಆಡಳಿತದೊಂದಿಗೆ ನಿಕಟ ಸಮನ್ವಯದಿಂದ ಕೆಲಸ ಮಾಡುವಂತೆ ಒತ್ತಾಯಿಸಿದರು. ಸಕಾಲಿಕ ರಕ್ಷಣಾ ಕಾರ್ಯಾಚರಣೆಗಳು ಮತ್ತು ಪೀಡಿತ ಎಲ್ಲರಿಗೂ ಪರಿಣಾಮಕಾರಿ ಪರಿಹಾರ ಮತ್ತು ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು. "ಕೇಂದ್ರ ಸರ್ಕಾರ, ಲೆಫ್ಟಿನೆಂಟ್ ಕಮಿಟಿ ಕಚೇರಿ ರಾಜ್ಯ ಸರ್ಕಾರಕ್ಕೆ ಅಗತ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಬೇಕು ಮತ್ತು ಪ್ರತಿ ಪೀಡಿತ ಕುಟುಂಬಕ್ಕೆ ತ್ವರಿತ ರಕ್ಷಣೆ, ಪರಿಹಾರ ಮತ್ತು ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು ನಿಕಟ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ನಾನು ಒತ್ತಾಯಿಸುತ್ತೇನೆ" ಎಂದು ಅವರು ಹೇಳಿದರು. ಖರ್ಗೆ ಅವರು ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರಿಗೆ ಬಿಕ್ಕಟ್ಟಿನ ಸಮಯದಲ್ಲಿ ಪೀಡಿತ ಜನರೊಂದಿಗೆ ನಿಂತು ಸಾಧ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಬೇಕೆಂದು ಮನವಿ ಮಾಡಿದರು. "ಈ ಕಷ್ಟದ ಸಮಯದಲ್ಲಿ ಪೀಡಿತ ಜನರಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡುವಂತೆ ನಾನು ಎಲ್ಲಾ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರಿಗೆ ಮನವಿ ಮಾಡುತ್ತೇನೆ" ಎಂದು ಅವರು ಹೇಳಿದರು. ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ಖರ್ಗೆ ಕೋರಿದರು, ಕಒ ಅಂಖಇಖ ನಿಧಿಯ ಮೂಲಕ ವಿಳಂಬವಿಲ್ಲದೆ ಆರ್ಥಿಕ ನೆರವು ನೀಡಬೇಕೆಂದು ಒತ್ತಾಯಿಸಿದರು. ಜಮ್ಮು ಪ್ರದೇಶದ ಕೆಲವು ಭಾಗಗಳಲ್ಲಿ ಭಾರಿ ಮಳೆ ಮತ್ತು ಹಠಾತ್ ಪ್ರವಾಹದಿಂದ ಮೂಲಸೌಕರ್ಯಗಳು ಹಾನಿಗೊಳಗಾಗಿದ್ದು ಮತ್ತು ಹಲವಾರು ಕುಟುಂಬಗಳು ಸ್ಥಳಾಂತರಗೊಂಡಿರುವ ಹಿನ್ನೆಲೆಯಲ್ಲಿ ಅವರ ಮನವಿ ಬಂದಿದೆ. ಅಧಿಕಾರಿಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದ್ದಾರೆ ಮತ್ತು ವಿನಾಶದ ಸಂಪೂರ್ಣ ಪ್ರಮಾಣವನ್ನು ನಿರ್ಣಯಿಸುತ್ತಿದ್ದಾರೆ ಮತ್ತು ಪರಿಣಾಮ ಬೀರಿದವರಿಗೆ ಸಹಾಯವನ್ನು ವಿಸ್ತರಿಸುತ್ತಿದ್ದಾರೆ.

# ಮುಂಗಾರು ಅಧಿವೇಶನ ಆರಂಭವಾಗುತ್ತಿದ್ದಂತೆ ರಾಷ್ಟ್ರೀಯ ಗೌರವ, ಸುಪ್ರೀಂ ನ್ಯಾಯಾಧೀಶರ ಮಸೂದೆ ಮಂಡನೆ

**ನವದೆಹಲಿ, ಜುಲೈ 19:** ಮುಂಗಾರು ಅಧಿವೇಶನ ಆರಂಭವಾಗುತ್ತಿದ್ದಂತೆ ಸರ್ಕಾರ ಸೋಮವಾರ ಸಂಸತ್ತಿನಲ್ಲಿ ಎರಡು ಮಹತ್ವದ ಮಸೂದೆಗಳನ್ನು ಮಂಡಿಸಲಿದೆ, ಒಂದು ರಾಜ್ಯಸಭೆಯಲ್ಲಿ ರಾಷ್ಟ್ರೀಯ ಗೌರವಕ್ಕೆ ಅವಮಾನ ಮಾಡುವ ಕುರಿತ ಕಾನೂನಿಗೆ ತಿದ್ದುಪಡಿಗಳನ್ನು ಪ್ರಸ್ತಾಪಿಸುವುದು ಮತ್ತು ಇನ್ನೊಂದು ಲೋಕಸಭೆಯಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಅನುಮೋದಿತ ಬಲವನ್ನು ನಿಯಂತ್ರಿಸುವ ಶಾಸನಕ್ಕೆ ಬದಲಾವಣೆಗಳನ್ನು ಕೋರುವುದು. ಜುಲೈ 20 ರ ವ್ಯವಹಾರಗಳ ಪಟ್ಟಿಯ ಪ್ರಕಾರ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆ, 2026 ಅನ್ನು ಮಂಡಿಸಲು ಅನುಮತಿ ಕೋರಲಿದ್ದಾರೆ. ಪ್ರಸ್ತಾವಿತ ಶಾಸನವು 1971 ರ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ ಕಾಯ್ದೆಯನ್ನು ತಿದ್ದುಪಡಿ ಮಾಡಲು ಪ್ರಯತ್ನಿಸುತ್ತದೆ. ಮಸೂದೆಯನ್ನು ಪರಿಚಯಿಸಲು ನಿರ್ಧರಿಸಲಾಗಿದ್ದರೂ, ಪ್ರಸ್ತಾವಿತ ತಿದ್ದುಪಡಿಗಳ ಸ್ವರೂಪವನ್ನು ಸರ್ಕಾರ ಇನ್ನೂ ಬಹಿರಂಗಪಡಿಸಿಲ್ಲ. 1971 ರ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ ಕಾಯ್ದೆಯು ರಾಷ್ಟ್ರಧ್ವಜ, ಭಾರತದ ಸಂವಿಧಾನ ಮತ್ತು ರಾಷ್ಟ್ರಗೀತೆಗೆ ಅವಮಾನಕರವೆಂದು ಪರಿಗಣಿಸಲಾದ ಕೃತ್ಯಗಳಿಗೆ ದಂಡವನ್ನು ಸೂಚಿಸುತ್ತದೆ. ರಾಷ್ಟ್ರೀಯ ಚಿಹ್ನೆಗಳ ರಕ್ಷಣೆಯನ್ನು ಬಲಪಡಿಸಲು ಮತ್ತು ಅವುಗಳ ಘನತೆಯನ್ನು ಎತ್ತಿಹಿಡಿಯಲು ಕಾನೂನಿಗೆ ಹಿಂದೆ ತಿದ್ದುಪಡಿಗಳನ್ನು ಮಾಡಲಾಗಿದೆ. ಲೋಕಸಭೆಯಲ್ಲಿ, ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ತಿದ್ದುಪಡಿ ಮಸೂದೆ, 2026 ಅನ್ನು ಮಂಡಿಸಲು ಅನುಮತಿ ಕೋರಲಿದ್ದಾರೆ. ಪ್ರಸ್ತಾವಿತ ಶಾಸನವು ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ಕಾಯ್ದೆ, 1956 ಅನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆ, ಇದು ಸುಪ್ರೀಂ ಕೋರ್ಟ್‌ನಲ್ಲಿ ಅನುಮೋದಿತ ನ್ಯಾಯಾಧೀಶರ ಬಲವನ್ನು ನಿರ್ಧರಿಸುತ್ತದೆ. ಲೋಕಸಭೆಯ ವ್ಯವಹಾರ ಹೇಳಿಕೆಯಲ್ಲಿ ಮಸೂದೆಯನ್ನು ಪರಿಚಯಿಸಲು ಪಟ್ಟಿ ಮಾಡಲಾಗಿದೆ ಆದರೆ ನ್ಯಾಯಾಧೀಶರ ಸಂಖ್ಯೆಯಲ್ಲಿ ಪ್ರಸ್ತಾವಿತ ಬದಲಾವಣೆಗಳನ್ನು ಅಥವಾ ತಿದ್ದುಪಡಿಯ ಹಿಂದಿನ ಕಾರಣಗಳನ್ನು ವಿವರಿಸುವುದಿಲ್ಲ. ಜುಲೈ 20 ರಂದು ಪ್ರಾರಂಭವಾಗುವ ಮಳೆಗಾಲದ ಅಧಿವೇಶನಕ್ಕಾಗಿ ಈ ಎರಡು ಮಸೂದೆಗಳು ಸರ್ಕಾರದ ಶಾಸಕಾಂಗ ವ್ಯವಹಾರದ ಭಾಗವಾಗಿದೆ.

ಅಧಿವೇಶನವು ಹಲವಾರು ಶಾಸಕಾಂಗ ಮತ್ತು ಹಣಕಾಸು ಕ್ರಮಗಳ ಪರಿಚಯ ಮತ್ತು ಪರಿಗಣನೆಗೆ ಸಾಕ್ಷಿಯಾಗುವ ನಿರೀಕ್ಷೆಯಿದೆ, ಜೊತೆಗೆ ಖಜಾನೆ ಮತ್ತು ವಿರೋಧ ಪಕ್ಷದ ಪೀಠಗಳು ಎತ್ತುವ ಸಾಧ್ಯತೆಯಿರುವ ವಿಷಯಗಳ ಕುರಿತು ಚರ್ಚೆಗಳು ನಡೆಯಲಿವೆ. ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾದ ಮಸೂದೆಗಳನ್ನು ವಿವರಿಸುವ ತಾತ್ಕಾಲಿಕ ಶಾಸಕಾಂಗ ಕಾರ್ಯಸೂಚಿಯನ್ನು ಸರ್ಕಾರ ಈಗಾಗಲೇ ಪ್ರಸಾರ ಮಾಡಿದೆ.

# ವಸತಿ: ವಿಶ್ವದ ಅತ್ಯಂತ ಅಗ್ಗದ ನಗರ ದೆಹಲಿ ಹೊರಹೊಮ್ಮಿದೆ-ಮಹತ್ವದ ವರದಿ

**ನವದೆಹಲಿ, ಜ.19:** ದೆಹಲಿಯು ದೈನಂದಿನ ಜೀವನಕ್ಕಾಗಿ ವಿಶ್ವದ ಅತ್ಯಂತ ಕೈಗೆಟುಕುವ ಪ್ರಮುಖ ನಗರಗಳಲ್ಲಿ ಒಂದಾಗಿ ಉಳಿದಿದೆ, ಡೇಟಿಂಗ್, ವಸತಿ ಮತ್ತು ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್‌ಗೆ ಕಡಿಮೆ ವೆಚ್ಚವನ್ನು ನೀಡುತ್ತದೆ. ಆದಾಗ್ಯೂ, ಕೈಗೆಟುಕುವಿಕೆಯು ವಿನಿಮಯದೊಂದಿಗೆ ಬರುತ್ತದೆ – ಡಾಯ್ಚ ಬ್ಯಾಂಕಿನ ಇತ್ತೀಚಿನ ಮ್ಯಾಪಿಂಗ್ ದಿ ವರ್ಲ್ಡ್ಸ್ ಪ್ರೈಸಸ್ 2026 ವರದಿಯ ಪ್ರಕಾರ, ಇತರ ಜಾಗತಿಕ ನಗರಗಳಿಗೆ ಹೋಲಿಸಿದರೆ ಅದರ ನಿವಾಸಿಗಳು ಕಡಿಮೆ ಸಂಬಳವನ್ನು ಗಳಿಸುತ್ತಾರೆ. ಬೆಲೆಗಳು, ವೇತನಗಳು ಮತ್ತು ಜೀವನದ ಗುಣಮಟ್ಟದ ವಿಷಯದಲ್ಲಿ 69 ಜಾಗತಿಕ ನಗರಗಳನ್ನು ಹೋಲಿಸುವ ವರದಿಯು, ದೆಹಲಿಯಲ್ಲಿ ಒಂದು ವಿಶಿಷ್ಟವಾದ "ಅಗ್ಗದ ದಿನಾಂಕ"ವು ಸುಮಾರು 103 ಡಾಲರ್ (ಸರಿಸುಮಾರು ರೂ 9,920) ವೆಚ್ಚವಾಗುತ್ತದೆ ಎಂದು ಕಂಡುಹಿಡಿದಿದೆ, ಇದು ಪ್ರಣಯ ಪ್ರವಾಸಕ್ಕಾಗಿ ಸಮೀಕ್ಷೆಯಲ್ಲಿ ಅತ್ಯಂತ ಕಡಿಮೆ ದುಬಾರಿ ನಗರವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಜಿನೀವಾ ಅತ್ಯಂತ ದುಬಾರಿ ನಗರವಾಗಿ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ, ಅಲ್ಲಿ ಇದೇ ರೀತಿಯ ವಿಹಾರಕ್ಕೆ ಸುಮಾರು 475 ಡಾಲರ್ ವೆಚ್ಚವಾಗುತ್ತದೆ.

ಡಾಯ್ಚ ಬ್ಯಾಂಕಿನ "ಅಗ್ಗದ ದಿನಾಂಕ" ಬುಟ್ಟಿಯಲ್ಲಿ ಒಂದು ಬಾಟಲ್ ವೈನ್, ಇಬ್ಬರಿಗೆ ಭೋಜನ, ಎರಡು ಕಾಫಿ, ಸಿನಿಮಾ ಟಿಕೆಟ್, ಸಾರ್ವಜನಿಕ ಸಾರಿಗೆ ದರ, ಟ್ಯಾಕ್ಸಿ ಸವಾರಿ ಮತ್ತು ಜೀನ್ಸ್ ಮತ್ತು ಉಡುಗೆ ಸೇರಿದಂತೆ ಕೆಲವು ಶಾಪಿಂಗ್ ವಸ್ತುಗಳು ಸೇರಿವೆ. ದೆಹಲಿಯು ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್‌ಗೆ ಜಾಗತಿಕವಾಗಿ ಅತ್ಯಂತ ಕೈಗೆಟುಕುವ ನಗರವಾಗಿ ಹೊರಹೊಮ್ಮಿದೆ, ಮಾಸಿಕ ಚಂದಾದಾರಿಕೆ ಸುಮಾರು 7.3 ಡಾಲರ್ (ಸುಮಾರು ರೂ. 703) ವೆಚ್ಚವಾಗುತ್ತದೆ, ಇದು ಅಧ್ಯಯನದಲ್ಲಿ ಒಳಗೊಂಡಿರುವ ಎಲ್ಲಾ ನಗರಗಳಲ್ಲಿ ಅತ್ಯಂತ ಕಡಿಮೆ. ರಾಷ್ಟ್ರೀಯ ರಾಜಧಾನಿಯಲ್ಲಿ ವಸತಿ ವೆಚ್ಚಗಳು ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರ ತುಲನಾತ್ಮಕವಾಗಿ ಕಡಿಮೆಯಾಗಿದೆ. ನಗರ ಕೇಂದ್ರದಲ್ಲಿ ವಸತಿ ಆಸ್ತಿಯ ಸರಾಸರಿ ಬೆಲೆ ಪ್ರತಿ ಚದರ ಮೀಟರ್‌ಗೆ 2,465 ಡಾಲರ್ (ರೂ. 2.37 ಲಕ್ಷ) ಎಂದು ಅಂದಾಜಿಸಲಾಗಿದೆ, ಇದು ದೆಹಲಿಯನ್ನು ಜಾಗತಿಕ ಆಸ್ತಿ ಬೆಲೆ ಶ್ರೇಯಾಂಕದಲ್ಲಿ ಕೊನೆಯ ಸ್ಥಾನದಲ್ಲಿರಿಸಿದೆ. ವರದಿಯ ಪ್ರಕಾರ, ಕಳೆದ ದಶಕದಲ್ಲಿ ಆಸ್ತಿ ಬೆಲೆಗಳು ಡಾಲರ್ ಲೆಕ್ಕದಲ್ಲಿ ಸುಮಾರು 10% ರಷ್ಟು ಕುಸಿದಿವೆ, ಆದಾಗ್ಯೂ ಅವು 2019 ರಿಂದ 15.7% ರಷ್ಟು ಚೇತರಿಸಿಕೊಂಡಿವೆ. ಕೈಗೆಟುಕುವಿಕೆಯ ಹೊರತಾಗಿಯೂ, ದೆಹಲಿಯು ನಿವ್ವಳ ಮಾಸಿಕ ಸಂಬಳದ ವಿಷಯದಲ್ಲಿ 69 ನಗರಗಳಲ್ಲಿ 66 ನೇ ಸ್ಥಾನದಲ್ಲಿದೆ. ಸರಾಸರಿ ಟೇಕ್-ಹೋಮ್ ವೇತನವು 538 (ಸುಮಾರು ರೂ. 51,800)ಡಾಲರ್ ಆಗಿದ್ದು, ಇದು ನ್ಯೂಯಾರ್ಕ್‌ನಲ್ಲಿ ಸರಿಸುಮಾರು ಗಳಿಕೆಯ ಹತ್ತನೇ ಒಂದು ಭಾಗಕ್ಕೆ ಸಮನಾಗಿರುತ್ತದೆ. ಕಳೆದ ದಶಕದಲ್ಲಿ ನಗರದಲ್ಲಿ ಸಂಬಳವು ಡಾಲರ್ ಲೆಕ್ಕದಲ್ಲಿ 17.7% ಮತ್ತು 2019 ರಿಂದ 3.3% ರಷ್ಟು ಕಡಿಮೆಯಾಗಿದೆ ಎಂದು ವರದಿ ಗಮನಿಸಿದೆ, ಇದು ಕರೆನ್ಸಿ ಚಲನೆ ಮತ್ತು ವೇತನ ಪ್ರವೃತ್ತಿಗಳ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ನಗರದ ಒಟ್ಟಾರೆ ಜೀವನದ ಗುಣಮಟ್ಟವು ಜಾಗತಿಕ ಗೆಳೆಯರಿಗಿಂತ ಹಿಂದುಳಿದಿದೆ. ಖರೀದಿ ಶಕ್ತಿ, ಆರೋಗ್ಯ ರಕ್ಷಣೆ, ಸುರಕ್ಷತೆ, ವಸತಿ ಕೈಗೆಟುಕುವಿಕೆ, ಪ್ರಯಾಣ, ಮಾಲಿನ್ಯ ಮತ್ತು ಹವಾಮಾನದಂತಹ ಅಂಶಗಳನ್ನು ನಿರ್ಣಯಿಸುವ ಡಾಯ್ಚ ಬ್ಯಾಂಕಿನ ಜೀವನ ಗುಣಮಟ್ಟದ ಶ್ರೇಯಾಂಕಗಳಲ್ಲಿ ದೆಹಲಿ ಅಗ್ರ 50 ನಗರಗಳಲ್ಲಿ ಕಾಣಿಸಿಕೊಂಡಿಲ್ಲ. ದೆಹಲಿಯಲ್ಲಿ ಹಲವಾರು ಗ್ರಾಹಕ ವೆಚ್ಚಗಳು ಜಾಗತಿಕವಾಗಿ ಅತ್ಯಂತ ಕಡಿಮೆಯಾಗಿ ಉಳಿದಿವೆ ಎಂದು ವರದಿಯು ಎತ್ತಿ ತೋರಿಸಿದೆ. ಸಾಮಾನ್ಯ ಕ್ಯಾಪುಸಿನೊ ಬೆಲೆ ಸುಮಾರು 2.40 ಡಾಲರ್ (ಸುಮಾರು ರೂ. 231), ಆದರೆ ನಗರ ಕೇಂದ್ರದಲ್ಲಿ ಮೂರು ಮಲಗುವ ಕೋಣೆಗಳ ಅಪಾರ್ಟ್‌ಮೆಂಟ್ ಬಾಡಿಗೆಗೆ ತಿಂಗಳಿಗೆ ಸರಾಸರಿ 685 ಡಾಲರ್ (ಸುಮಾರು ರೂ. 65,970) ಇರುತ್ತದೆ. ಕುತೂಹಲಕಾರಿಯಾಗಿ, ದೆಹಲಿಯಲ್ಲಿ ಪೆಟ್ರೋಲ್ ಬೆಲೆಗಳು ನ್ಯೂಯಾರ್ಕ್‌ನ ಬೆಲೆಗಳಿಗೆ ವ್ಯಾಪಕವಾಗಿ ಹೋಲಿಸಬಹುದು, ಆದಾಯ ಮಟ್ಟದಲ್ಲಿ ಗಮನಾರ್ಹ ವ್ಯತ್ಯಾಸಗಳ ಹೊರತಾಗಿಯೂ, ಪ್ರತಿ ಲೀಟರ್‌ಗೆ 1.05 ಡಾಲರ್ ಮತ್ತು ಪ್ರತಿ ಲೀಟರ್‌ಗೆ 1.08. ಡಾಲರ್ ಕಳೆದ ದಶಕದಲ್ಲಿ ಹಲವಾರು ದಿನನಿತ್ಯದ ವೆಚ್ಚಗಳು ಡಾಲರ್ ಪರಿಭಾಷೆಯಲ್ಲಿ ಅಗ್ಗವಾಗಿವೆ ಎಂದು ಅಧ್ಯಯನವು ಗಮನಿಸಿದೆ. ಜಿಮ್ ಸದಸ್ಯತ್ವಗಳು, ಬ್ರಾಂಡೆಡ್ ಜೀನ್ಸ್ ಮತ್ತು ಬೇಸಿಗೆ ಉಡುಪುಗಳು ಬೆಲೆಯಲ್ಲಿ ಗಮನಾರ್ಹ ಕುಸಿತವನ್ನು ಕಂಡಿವೆ, ಆದರೆ ಉಪಯುಕ್ತತೆಗಳು, ಮಧ್ಯಮ ಶ್ರೇಣಿಯ ರೆಸ್ಟೋರೆಂಟ್ ಊಟಗಳು ಮತ್ತು ಬಟ್ಟೆಗಳು ಹೆಚ್ಚಿನ ಅಂತರರಾಷ್ಟ್ರೀಯ ನಗರಗಳಿಗೆ ಹೋಲಿಸಿದರೆ ತುಲನಾತ್ಮಕವಾಗಿ ಅಗ್ಗವಾಗಿ ಉಳಿದಿವೆ. ಡಾಯ್ಚ ಬ್ಯಾಂಕ್ ಸಂಶೋಧನಾ ಸಂಸ್ಥೆಯ ಜಿಮ್ ರೀಡ್ ಮತ್ತು ಗಲಿನಾ ಪೊಜ್ಡ್ನ್ಯಾಕೋವಾ ಅವರು ಸಿದ್ಧಪಡಿಸಿದ ವರದಿಯು ಪ್ರಾಥಮಿಕವಾಗಿ ನಂಬಿಯೊದಿಂದ ಕ್ರೌಡ್‌ಸೋರ್ಸ್ಡ್ ಡೇಟಾವನ್ನು ಆಧರಿಸಿದೆ, ಇದನ್ನು ನಂತರ ಬ್ಯಾಂಕಿನ ಸಂಶೋಧನಾ ತಂಡವು ಪರಿಶೀಲಿಸಿತು ಮತ್ತು ಮೌಲ್ಯೀಕರಿಸಿತು.



ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಬೇಲಾ ಪ್ರದೇಶದಲ್ಲಿ ಭಾನುವಾರ ಸುರಿದ ಭಾರಿ ಮಳೆಯಿಂದಾಗಿ ಹಠಾತ್ ಪ್ರವಾಹದಿಂದ ವ್ಯಾಪಕ ಹಾನಿ ಉಂಟಾಗಿದೆ.

# ಜು.23ರವರೆಗೆ ಪಂಜಾಬ್, ಹರಿಯಾಣ, ದೆಹಲಿ, ಸುತ್ತಮುತ್ತ ವ್ಯಾಪಕ ಮಳೆಯಾಗುವ ಮುನ್ಸೂಚನೆ



**ಚಂಡೀಗಢ, ಜುಲೈ 19:** ಮುಂಬರುವ ದಿನಗಳಲ್ಲಿ ಹರಿಯಾಣದಾದ್ಯಂತ ವ್ಯಾಪಕ ಮಳೆಯಾಗುವ ಸಾಧ್ಯತೆ ಇದ್ದು, ಜುಲೈ 20 ರಿಂದ 23 ರವರೆಗೆ ಮಳೆಯ ಚಟುವಟಿಕೆಯಲ್ಲಿ ಗಮನಾರ್ಹ ಹೆಚ್ಚಳವಾಗಲಿದೆ ಎಂದು ಭಾರತ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ 24 ಗಂಟೆಗಳಲ್ಲಿ ಈ ಮಳೆಯಿಂದಾಗಿ ರಾಜ್ಯದಾದ್ಯಂತ ಹಗಲಿನ ತಾಪಮಾನ 3°C ನಿಂದ 5°C ರಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ. ನವದೆಹಲಿಯ ಪ್ರಾದೇಶಿಕ ಹವಾಮಾನ ಕೇಂದ್ರ (ಆರ್‌ಎಂಸಿ) ಪ್ರಕಾರ, ಶನಿವಾರ ಬೆಳಗ್ಗೆ 8:30 ಕ್ಕೆ ಕೊನೆಗೊಂಡ ಕಳೆದ 24 ಗಂಟೆಗಳಲ್ಲಿ ಹರಿಯಾಣದ ಪ್ರತ್ಯೇಕ ಸ್ಥಳಗಳಲ್ಲಿ ಮಳೆ ಮತ್ತು ಗುಡುಗು ಸಹಿತ ಮಳೆಯಾಗಿದೆ, ಆದರೆ ನೆರೆಯ ದೆಹಲಿಯಲ್ಲಿ ಹವಾಮಾನವು ಶುಷ್ಕವಾಗಿತ್ತು. ಐಎಂಡಿಯ ಏಳು ದಿನಗಳ ಮುನ್ಸೂಚನೆಯು ಭಾನುವಾರ ರಾತ್ರಿಯಿಂದ ಪ್ರಾರಂಭವಾಗಿ ವಾರವಿಡೀ ಮಳೆಯ ಚಟುವಟಿಕೆ ತೀವ್ರಗೊಳ್ಳುತ್ತದೆ ಎಂದು ಸೂಚಿಸುತ್ತದೆ. ಜುಲೈ 20, 22 ಮತ್ತು 23 ರಂದು ಸಾಕಷ್ಟು ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ, ಆದರೆ ಜುಲೈ 21 ರಂದು ವ್ಯಾಪಕ ಮಳೆಯಾಗುವ ಮುನ್ಸೂಚನೆ ಇದೆ. ಜುಲೈ 19, 24 ಮತ್ತು 25 ರಂದು ಚದುರಿದ ಮಳೆಯಾಗುವ ನಿರೀಕ್ಷೆಯಿದೆ. ಮುಂದಿನ 24 ಗಂಟೆಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಇರುವುದಿಲ್ಲ ಎಂದು ಹವಾಮಾನ ಕಚೇರಿ ಮುನ್ಸೂಚನೆ ನೀಡಿಲ್ಲ, ನಂತರ ವಾಯುವ್ಯ ಭಾರತದ ಬಯಲು ಪ್ರದೇಶಗಳಲ್ಲಿ 3°C ನಿಂದ 5°C ವರೆಗಿನ ಇಳಿಕೆ ಕಂಡುಬರಲಿದ್ದು, ಇದು ಚಾಲ್ತಿಯಲ್ಲಿರುವ ಬಿಸಿ ಮತ್ತು ಆರ್ದ್ರ ಪರಿಸ್ಥಿತಿಗಳಿಂದ ಪರಿಹಾರವನ್ನು ನೀಡುತ್ತದೆ. ವಾಯುವ್ಯ ಭಾರತದಾದ್ಯಂತ, ಕಳೆದ 24 ಗಂಟೆಗಳಲ್ಲಿ ಮಾನ್ಸೂನ್ ಚಟುವಟಿಕೆ ತೀವ್ರವಾಗಿ ಮುಂದುವರೆದಿದೆ. ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಉತ್ತರ ಪ್ರದೇಶದ ಹಲವಾರು ಸ್ಥಳಗಳಲ್ಲಿ ಭಾರೀ ಮಳೆ ದಾಖಲಾಗಿದೆ, ಆದರೆ ಪಂಜಾಬ್, ಹರಿಯಾಣ ಮತ್ತು ಪೂರ್ವ ರಾಜಸ್ಥಾನದ ಕೆಲವು ಭಾಗಗಳಲ್ಲಿ ಮಳೆ ಮತ್ತು ಗುಡುಗು ಸಹಿತ ಮಳೆಯಾಗಿದೆ. ಮುಂದೆ ನೋಡುತ್ತಿರುವಾಗ, ಜುಲೈ 26–28 ರವರೆಗೆ ಪಶ್ಚಿಮ ಹಿಮಾಲಯ ಪ್ರದೇಶ ಮತ್ತು ವಾಯುವ್ಯ ಭಾರತದ ಬಯಲು ಪ್ರದೇಶಗಳಲ್ಲಿ ಚದುರಿದ ಅಥವಾ ಸಾಕಷ್ಟು ವ್ಯಾಪಕ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ, ಇದು ಪ್ರಸ್ತುತ ಮುನ್ಸೂಚನೆಯ ಅವಧಿಯನ್ನು ಮೀರಿ ಮಾನ್ಸೂನ್ ಪರಿಸ್ಥಿತಿಗಳು ಅನುಕೂಲಕರವಾಗಿರುತ್ತವೆ ಎಂದು ಸೂಚಿಸುತ್ತದೆ. ಹವಾಮಾನ ಇಲಾಖೆಯು ತನ್ನ ಮೌಸಮ್, ಮೇಘದೂತ್ ಮತ್ತು ದಾಮಿನಿ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ, ವಿಶೇಷವಾಗಿ ಗುಡುಗು ಮತ್ತು ಮಳೆಯ ಸಮಯದಲ್ಲಿ ಹವಾಮಾನ ಮುನ್ಸೂಚನೆಗಳು ಮತ್ತು ಮಿಂಚಿನ ಎಚ್ಚರಿಕೆಗಳ ಬಗ್ಗೆ ಜನರು ನವೀಕೃತವಾಗಿರಲು ಸೂಚಿಸಿದೆ.